ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 143
ಬೆಲೆ ರೂ : 2.00
ರಾಯಚೂರು
ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಗುರುವಾರ: 14-05-2026

# ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ : ಅಶೋಕ್ ಆಕ್ರೋಶ

**ಬೆಂಗಳೂರು,ಮೇ 13–** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪೊಲೀಸ್ ಇಲಾಖೆ ಶಿಸ್ತು ನೈತಿಕತೆ ಮತ್ತು ಜನರ ವಿಶ್ವಾಸ ಕಳೆದುಕೊಂಡು ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಕಾಂಗ್ರೆಸ್ ಸರ್ಕಾರದ ವಿರುದ್ಧ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಸಿದ್ದರಾಮಯ್ಯನವರೇ ಗ್ಯಾರೆಂಟಿ ಸರ್ಕಾರದಲ್ಲಿ ರಾಜ್ಯದ ಜನರಿಗೆ ಜೀವ ಆಸ್ತಿ ಮತ್ತು ಮಾನದ ರಕ್ಷಣೆಗಾಗಿ ಗ್ಯಾರಂಟಿ ನೀಡುವವರು ಯಾರು ಎಂದು ಪ್ರಶ್ನೆ ಮಾಡಿದ್ದಾರೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದ್ದು ರಕ್ಷಕರೇ ಭಕ್ಷಕರಾಗಿದ್ದಾರೆ. ಪೊಲೀಸ್ ಇಲಾಖೆ ಕುರಿತಂತೆ ಮಾಧ್ಯಮಗಳಲ್ಲಿ ವರದಿಯಾಗಿರುವ ಅಂಕಿಅಂಶಗಳು ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಬೆಚ್ಚಿ ಬೀಳಿಸುವ ಸತ್ಯವನ್ನು ಬಯಲಿಗೆ ಎಳೆದಿವೆ ಎಂದು ಆತಂಕ ಹೊರಹಾಕಿದ್ದಾರೆ.

ಕೇವಲ ಎರಡು ವರ್ಷಗಳಲ್ಲಿ 713 ಪೊಲೀಸ್ ಅಧಿಕಾರಿಗಳ ಅಮಾನತುಪಡಿಸಲಾಗಿದೆ. ಇಷ್ಟು ದೊಡ್ಡ ಸಂಖ್ಯೆಯ ಅಮಾನತುಗಳು ಎಂದರೆ ಇದು ಯಾರೋ ಕೆಲವರ ವೈಯಕ್ತಿಕ ತಪ್ಪಲ್ಲ, ಸಂಪೂರ್ಣ ವ್ಯವಸ್ಥೆಯೇ ಕುಸಿದುಬಿದ್ದಿದೆ ಎಂಬುದಕ್ಕೆ ಸಾಕ್ಷಿ. ಗಂಭೀರ ಅಪರಾಧಗಳಲ್ಲಿ 95 ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ಸಾಮಾನ್ಯ ನಾಗರಿಕರು ಯಾರನ್ನು ನಂಬಬೇಕು? ಸುರಕ್ಷತೆಯ ಸಂಕೇತವಾಗಿರಬೇಕಾದ ಖಾಕಿ, ಇಂದು ಭಯ ಮತ್ತು ಅನುಮಾನಗಳ ಪ್ರತೀಕವಾಗುತ್ತಿರುವುದೇಕೆ? ಎಂದು ಪ್ರಶ್ನೆಸಿದ್ದಾರೆ.





ದರೋಡೆ, ಕಳ್ಳತನ, ಕೊಲೆ ಆರೋಪಗಳಲ್ಲೂ ಪೊಲೀಸರ ಹೆಸರುಗಳು ಕೇಳಿ ಬಂದಿವೆ. ಇದು ಕೇಳುವುದಕ್ಕೂ ನಾಚಿಕೆಯಾಗುತ್ತದೆ. ಕಾನೂನು ಜಾರಿ ಮಾಡಬೇಕಾದವರೇ ಕಾನೂನನ್ನು ಗಾಳಿಗೆ ತೂರಿ ಉಲ್ಲಂಘಿಸಲು ಆರಂಭಿಸಿದರೆ ರಾಜ್ಯದಲ್ಲಿ ನ್ಯಾಯ ಹೇಗೆ ಉಳಿಯುತ್ತದೆ? ಅಮಾನತುಗೊಂಡವರಲ್ಲಿ ಬಹುಪಾಲು ಅಧಿಕಾರಿಗಳು ಬೆಂಗಳೂರಿನವರೇ ಎಂಬ ಸಂಗತಿ ಆತಂಕಕಾರಿ. ದೇಶದ ತಂತ್ರಜ್ಞಾನ ರಾಜಧಾನಿ ಎಂದು ಹೆಮ್ಮೆಪಡುವ ನಗರದಲ್ಲಿ ಕಾನೂನು ಸುವ್ಯವಸ್ಥೆ ಈ ಮಟ್ಟಿಗೆ ಹದಗೆಟ್ಟರೆ ಬೆಂಗಳೂರಿನ ಬ್ರ್ಯಾಂಡ್ ವ್ಯಾಲ್ಯೂ, ವರ್ಚಸ್ಸಿಗೆ ಧಕ್ಕೆಯಾಗುವುದಿಲ್ಲವೇ? ಎಂದು ಸರ್ಕಾರವನ್ನು ತರಾಟೆಗೆತಗೆದುಕೊಂಡಿದ್ದಾರೆ.

400ಕ್ಕೂ ಹೆಚ್ಚು ಅಧಿಕಾರಿಗಳು ತಪ್ಪಿತಸ್ಥರೆಂದು ಸಾಬೀತಾಗಿದೆ. ಇದು ಕೇವಲ ಆರೋಪಗಳ ಹಂತದಲ್ಲಿಲ್ಲ.ವಿಭಾಗೀಯ ತನಿಖೆಗಳಲ್ಲೆ ತಪ್ಪಿತಸ್ಥರೆಂದು ಸಾಬೀತಾದರೂ, ಈ ಸರ್ಕಾರ ಯಾವ ಕಠಿಣ ಕ್ರಮ ತೆಗೆದುಕೊಂಡಿದೆ ಇಂದು ಜನರಲ್ಲಿ ಮೂಡಿರುವ ಭಯ ಏನೆಂದರೆ, ರೌಡಿ ಶೀಟರ್ಗಳ ಜೊತೆ ಕೈಜೋಡಿಸುವವರು, ನಕಲಿ ದಾಖಲೆಗಳ ಜಾಲ ನಡೆಸುವವರು, ಅಮಾಯಕರ ಮೇಲೆ ದೌರ್ಜನ್ಯ ಎಸಗುವವರು ಕಾನೂನಿನ ಭಯವಿಲ್ಲದೆ ಸಂಚರಿಸುತ್ತಿದ್ದಾರೆ ಎಂಬುದು.ಇದು ಕೇವಲ ಪೊಲೀಸ್ ಇಲಾಖೆಯ ವೈಫಲ್ಯವಲ್ಲ, ಇದು ಗೃಹ ಇಲಾಖೆಯ ಸಂಪೂರ್ಣ ದಿವಾಳಿತನ ಎಂದು ವಾಗ್ದಳಿ ನಡೆಸಿದ್ದಾರೆ.

ಈ ಸರ್ಕಾರ ಅಪರಾಧಿಗಳನ್ನು ನಿಯಂತ್ರಿಸುತ್ತಿದೆಯೇ? ಅಥವಾ ಅಪರಾಧಿಗಳಿಗೆ ರಾಜಕೀಯ ರಕ್ಷಣೆ ನೀಡುತ್ತಿದೆಯೇ? ಖಾಕಿಯ ಮೇಲಿನ ಜನರ ನಂಬಿಕೆಯನ್ನು ನಾಶಮಾಡಿದ ಈ ವ್ಯವಸ್ಥೆಯನ್ನು ತಕ್ಷಣವೇ ಶುದ್ಧಿಕರಿಸಬೇಕು. ಇಲ್ಲದಿದ್ದರೆ ಕರ್ನಾಟಕದ ಜನರ ಆಕ್ರೋಶವೇ ಈ ಸರ್ಕಾರವನ್ನು ಅಧಿಕಾರದ ಕುರ್ಚಿಯಿಂದ ಕೆಳಗಿಳಿಸುವ ದಿನ ದೂರವಿಲ್ಲ ಎಂದು ಸರ್ಕಾರಕ್ಕೆ ಅಶೋಕ್ ಎಚ್ಚರಿಕೆ ನೀಡಿದ್ದಾರೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 38,163 ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದರೆ, ಇದು ಸಾಮಾನ್ಯ ಆಡಳಿತ ವೈಫಲ್ಯವಲ್ಲ, ಇದು ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ನಿಧಾನವಾಗಿ ಕುಸಿಯಲು ಬಿಡುತ್ತಿರುವ ಕ್ರೂರ ನಿರ್ಲಕ್ಷ್ಯ, ಶೇ.22ರಷ್ಟು ಶಿಕ್ಷಕರ ಹುದ್ದೆಗಳು ಖಾಲಿ, ಅಂದರೆ ಪ್ರತಿ ಐದು ಹುದ್ದೆಗಳಲ್ಲಿ ಒಂದು ಹುದ್ದೆ ಖಾಲಿ ಇದ್ದರೆ ಶಾಲೆಗಳು ಹೇಗೆ ನಡೆಯಬೇಕು? ನಿಮ ಜಿಗ್ಯಾರಂಟಿಜ್ ಯೋಜನೆಗಳು ಮಕ್ಕಳಿಗೆ ಪಾಠ ಹೇಳುತ್ತವೆಯೇ? ತರಗತಿಯಲ್ಲಿ ಶಿಕ್ಷಕರೇ ಇಲ್ಲದಿದ್ದರೆ ಬಡ ಮಕ್ಕಳಿಗೆ ಅಕ್ಷರ ಯಾರು ಕಲಿಸಬೇಕು? ಅವರ ಕನಸುಗಳನ್ನು ಯಾರು ಕಟ್ಟಿಕೊಡಬೇಕು? ಎಂದು ಪ್ರಶ್ನೆ ಮಾಡಿದ್ದಾರೆ. 2ನೇಪುಟಕ್ಕೆ

# ನಟ ದಿಲೀಪ್ ರಾಜ್ ವಿಧಿವಶ: ಗಣ್ಯರ ಕಂಬನಿ



**ಬೆಂಗಳೂರು, ಮೇ. 13–** ಕನ್ನಡ ಕಿರುತೆರೆ ಮತ್ತು ಬೆಳ್ಳಿತೆರೆಯ ಜನಪ್ರಿಯ ನಟ-ನಿರ್ಮಾಪಕ ದಿಲೀಪ್ ರಾಜ್ ಅವರ ಅಕಾಲಿಕ ನಿಧನ ಕನ್ನಡ ಚಿತ್ರರಂಗವನ್ನು ಶೋಕ ಸಾಗರದಲ್ಲಿ ಮುಳುಗಿಸಿದೆ. ಕೇವಲ 47ನೇ ವಯಸ್ಸಿನಲ್ಲಿ ಹೃದಯಾಘಾತಕ್ಕೆ ಬಲಿಯಾದ ಅವರ ಸಾವಿನ ಸುದ್ದಿ ಅಭಿಮಾನಿಗಳು, ಸಹೋದ್ಯೋಗಿಗಳು ಮತ್ತು ಕಿರುತೆರೆ ವೀಕ್ಷಕರಿಗೆ ಆಘಾತ ತಂದಿದೆ. ಇಂದು ಬೆಳಗಿನ ಜಾವ ಮನೆಯಲ್ಲಿ ಇದ್ದಾಗಲೇ ಅವರಿಗೆ ತೀವ್ರ ಹೃದಯಾಘಾತ ಸಂಭವಿಸಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದಿದ್ದಾರೆ .


ರಂಗಭೂಮಿಯಿಂದ ಆರಂಭವಾದ ಕಲಾ ಪಯಣ
1978ರ ಸೆಪ್ಟೆಂಬರ್ 2ರಂದು ಬೆಂಗಳೂರಿನಲ್ಲಿ ಜನಿಸಿದ್ದ ದಿಲೀಪ್ ರಾಜ್ ಅವರಿಗೆ ಬಾಲ್ಯದಿಂದಲೇ ನಟನೆ ಹಾಗೂ ನೃತ್ಯದ ಮೇಲೆ ಅಪಾರ ಆಸಕ್ತಿ ಇತ್ತು. ಕಾಲೇಜು ದಿನಗಳಲ್ಲೇ ನಾಟಕ ತಂಡಗಳಿಗೆ ಸೇರಿ ರಂಗಭೂಮಿಯಲ್ಲಿ ತಮ್ಮ ಪ್ರತಿಭೆ ತೋರಲು ಆರಂಭಿಸಿದ್ದರು. ಅಲ್ಲಿಂದಲೇ ಅವರು ಕಿರುತೆರೆ ಮತ್ತು ಬಳಿಕ ಸಿನಿಮಾರಂಗಕ್ಕೆ ಕಾಲಿಟ್ಟರು. 2ನೇಪುಟಕ್ಕೆ►

# ಮಾಹಿತಿ ನೀಡದ ಕಲ್ಬುರ್ಗಿ ಜಿ.ಪಂ ಉಪ ಕಾರ್ಯದರ್ಶಿ ಸೇರಿ 17 ಮಂದಿ ಅಧಿಕಾರಿಗಳಿಗೆ ದಂಡ: ಬಿ.ವೆಂಕಟಸಿಂಗ್

ಧೈರ್ಯದ ದಾರಿ

**ರಾಯಚೂರು ಮೇ.13:** ಸಕಾಲಕ್ಕೆ ಮಾಹಿತಿ ನೀಡಲು ನಿರ್ಲಕ್ಷ್ಯ ವಹಿಸುವುದು ಸೇರಿದಂತೆ ವಿಚಾರಣೆಗೆ ಗೈರು ಹಾಜರಾಗಿ ಆಯೋಗದ ನೋಟಿಸ ಗೆ ಸ್ಪಂದನೆ ನೀಡದ ಕಾರಣ ಕಲ್ಬುರ್ಗಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಹಾಗೂ ಗಂಗಾವತಿ ತಾಲೂಕು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ಪಾಲಾನಾ ಅಭಿಯಂತರ ದೇವಣ್ಣ ಕಟ್ಟಿ, ರಾಯಚೂರು ತಾಲೂಕು ಗ್ರೇಡ್ – 2 ತಹಸೀಲ್ದಾರ್ ಪರಶುರಾಮ್ ಸೇರಿ ಹಲವು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಗ್ರಾಮ ಪಂಚಾಯತ ಕಾರ್ಯದರ್ಶಿಗಳಿಗೆ ರಾಜ್ಯ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠ ದಿಂದ ದಂಡ ವಿಧಿಸಿ ಆದೇಶ ಮಾಡಲಾಗಿದೆ ಎಂದು ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ ಸಿಂಗ್ ತಿಳಿಸಿದ್ದಾರೆ. ಏಪ್ರಿಲ್ ತಿಂಗಳಿನಲ್ಲಿ ನಡೆದ ವಿಚಾರಣೆ ವೇಳೆ ಗೈರು ಹಾಜರಾಗಿದ್ದಲ್ಲದೆ, ಮಾಹಿತಿ ನೀಡದ ಕಾರಣ ಕಲ್ಬುರ್ಗಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶ್ರೀ ಲಕ್ಷ್ಮಣ ಶೃಂಗೇರಿಗೆ 10 ಸಾವಿರ, ಗಂಗಾವತಿ ತಾಲೂಕು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ದೇವಣ್ಣ ಕಟ್ಟಿಗೆ 15 ಸಾವಿರ,ರಾಯಚೂರು ತಾಲೂಕು ಗ್ರೇಡ್ 2 ತಹಸೀಲ್ದಾರ್ ಪರಶುರಾಮ ಗೆ 5 ಸಾವಿರ,ಜೇವರ್ಗಿ ತಾಲೂಕಿನ ಹುಲ್ಲೂರ ಗ್ರಾ.ಪಂ ಕಾರ್ಯದರ್ಶಿ ಮಲ್ಲಿಕಾರ್ಜುನಗೆ 5 ಸಾವಿರ, ಸುರುಪುರ ತಾಲೂಕಿನ ಆಲ್ದಾಳ ಗ್ರಾ.ಪಂ. ಕಾರ್ಯದರ್ಶಿ ರಾಜಕುಮಾರ ಸುಬೆದಾರಗೆ 10 ಸಾವಿರ, ಮಾನ್ವಿ ತಾಲೂಕಿನ ಆರೋಲಿ ಗ್ರಾಪಂ ಪಿ.ಡಿ.ಓ ರಘುನಾಥಗೆ 5 ಸಾವಿರ, ಆಳಂದ ತಾಲೂಕಿನ ಯಲಸಂಗಿ ಗ್ರಾ.ಪಂ ಪಿ.ಡಿ.ಓ ಜಗದೀಶಗೆ 15 ಸಾವಿರ,ಆಳಂದ್ ತಾಲೂಕ ಮುನಲ್ಲಿ ಗ್ರಾಮ ಪಂಚಾಯತ್






ಪಿ. ಡಿ ಓ. ಭೀಮರಾವ್ ಗೆ 10 ಸಾವಿರ ಸುರಪುರ ತಾಲೂಕಿನ ನಗನೂರು ಗ್ರಾಪಂ ಕಾರ್ಯದರ್ಶಿಯಾದ ಮಡಿವಾಳಪ್ಪಗೆ 10 ಸಾವಿರ, ಶಹಪುರ ತಾಲೂಕಿನ ಗೋಗಿ.ಕೆ. ಗ್ರಾ.ಪಂ. ಪಿ.ಡಿ.ಓ. ಸಿದ್ರಾಮಗೆ 10 ಸಾವಿರ, ಸಂಡೂರು ತಾಲೂಕಿನ ಹೊಸದರೋಜಿ ಗ್ರಾಪಂ ಕಾರ್ಯದರ್ಶಿ ಕಲ್ಲಪ್ಪಗೆ 10 ಸಾವಿರ, ಯಾದಗಿರ ತಾಲೂಕಿನ ಸೈದಾಪುರ ಗ್ರಾ.ಪಂ ಪಿ.ಡಿ.ಓ ಮುದುಕಣ್ಣ ಗೆ 10 ಸಾವಿರ, ವಡಗೇರಾ ತಾಲೂಕಿನ ತಡಿಬಿಡಿ ಗ್ರಾ.ಪಂ. ಕಾರ್ಯದರ್ಶಿ ಯಂಕನಗೌಡಗೆ 5 ಸಾವಿರ, ಕಾರಟಗಿ ತಾಲೂಕಿನ ಸಿದ್ದಾಪುರ ಗ್ರಾಪಂ ಕಾರ್ಯದರ್ಶಿ ಶ್ರೀಮತಿ ಜೋತಿ ರೆಡ್ಡರ್‌ಗೆ 10 ಸಾವಿರ ಕಲ್ಬುರ್ಗಿ ತಾಲೂಕಿನ ಹಾಗಾರಗ ಗ್ರಾ.ಪಂ. ಕಾರ್ಯದರ್ಶಿ ವೇದಾಂಗಗೆ 5 ಸಾವಿರ, ಲಿಂಗಸೂಗೂರು ತಾಲೂಕಿನ ಪೈದೊಡ್ಡಿ ಗ್ರಾ.ಪಂ.ನ ಕಾರ್ಯದರ್ಶಿ ಭೀಮಣ್ಣಗೆ 10 ಸಾವಿರ, ಯಾದಗಿರ ತಾಲೂಕಿನ ರಾಮ ಸಮುದ್ರ ಗ್ರಾ.ಪಂ. ಕಾರ್ಯದರ್ಶಿ ಗಾಲಿಬಸಾಬ ಗೆ 5 ಸಾವಿರ ಹಾಗೂ ರಾಯಚೂರು ತಾಲೂಕಿನ ಗ್ರೇಡ್-2 ತಹಶೀಲದಾರ ಪರುಶುರಾಮಗೆ 5 ಸಾವಿರ ಸೇರಿ ಒಟ್ಟು 18 ಅಧಿಕಾರಿಗಳಿಗೆ ಏಪ್ರೀಲ್ ತಿಂಗಳಿನಲ್ಲಿ 1 ಲಕ್ಷ 50 ಸಾವಿರ ದಂಡ ವಿಧಿಸಲಾಗಿದೆ ಎಂದು ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಏಪ್ರೀಲ್ ತಿಂಗಳಲ್ಲಿ 564 ಪ್ರಕರಣಗಳು ವಿಚಾರಣೆಗೆ ಕೈಗೆತ್ತಿಕೊಂಡು 229 ಪ್ರಕರಣಗಳು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.
ತಾವು ಅಧಿಕಾರ ಸ್ವೀಕರಿಸಿದ ಬಳಿಕ ಒಟ್ಟು 3,084 ಪ್ರಕರಣಗಳು ಕೈಗೆತ್ತಿಕೊಂಡು 88 ದಿನ ವಿಚಾರಣೆ ನಡೆಸಿ 1,308 ಪ್ರಕರಣಗಳು ವಿಲೇವಾರಿ ಮಾಡಿರುವುದಾಗಿ ಆಯುಕ್ತರಾದ ಬಿ.ವೆಂಕಟಸಿಂಗ್ ತಿಳಿಸಿದ್ದಾರೆ.
ಪ್ರಕರಣಗಳ ತ್ವರಿತ ವಿಲೇವಾರಿಗೆ ಅನೂಕೂಲವಾಗಲು ಅಧಿಕಾರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ ಕುರಿತು ಅರಿವು ಮುಡಿಸಲು ಈಗಾಗಲೇ ಬಳ್ಳಾರಿ, ಬೀದರ್, 2ನೇಪುಟಕ್ಕೆ

# ಬೋಗಸ್ ದಾಖಲೆಯಡಿ ಭೂ ಒಡೆತನ ಯೋಜನೆ ಸೌಲಭ್ಯ: ತನಿಖೆಗೆ ಜೈ ಕನ್ನಡಿಗರ ಸೇನೆ ಆಗ್ರಹ



**ಕಲಬುರಗಿ:** ಜಿಲ್ಲೆಯ ಯಡ್ರಾಮಿ ತಾಲೂಕಿನ ಬೀಳವಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಮಖಂಡಿ ಗ್ರಾಮದಲ್ಲಿ ಬೋಗಸ್ ದಾಖಲಾತಿ ಪಡೆದು ಭೂ ಒಡೆತನ ಯೋಜನೆಯಡಿ ಜಮೀನು ಮಂಜೂರು ಮಾಡಿರುವ ಪ್ರಕರಣದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜೈ ಕನ್ನಡಿಗರ ಸೇನೆ ಜಿಲ್ಲಾ ಸಮಿತಿಯ ವತಿಯಿಂದ ಕಲಬುರಗಿಯ ನೂತನ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು.
ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ದತ್ತು ಹೆಚ್. ಭಾಸಗಿ ನೇತೃತ್ವದಲ್ಲಿ ನೂತನ ಜಿಲ್ಲಾಧಿಕಾರಿಯನ್ನು ಸನ್ಮಾನಿಸಿ ಸ್ವಾಗತಿಸಲಾಯಿತು, ನಂತರ ಸಲ್ಲಿಸಲಾದ ಮನವಿಯಲ್ಲಿ, ಭೂ ಒಡೆತನ ಯೋಜನೆಯಡಿ ಕೆಲವರು ಸಫಾಯಿ ಕರ್ಮಚಾರಿಗಳೆಂದು ಸುಳ್ಳು ದಾಖಲೆಗಳನ್ನು 2ನೇ ಪುಟಕ್ಕೆ

# ಪೌರ ಕಾರ್ಮಿಕರು ಆರೋಗ್ಯ ವಿಮೆಯ ಸೌಲಭ್ಯ ಪಡೆಯಿರಿ: ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ

ಧೈರ್ಯದ ದಾರಿ

**ರಾಯಚೂರು ಮೇ.13–** ಪೌರ ಕಾರ್ಮಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ 5 ಲಕ್ಷ ರೂ. ನಗದು ರಹಿತ ಆರೋಗ್ಯ ವಿಮಾ ಸೌಲಭ್ಯವನ್ನು ಸರ್ಕಾರ ಪೌರ ಕಾರ್ಮಿಕರಿಗೆ ನೀಡುತ್ತಿದೆ. ನಿವೃತ್ತಿಯುವರೆಗೂ ಕಾರ್ಡ್ ಬಳಸಿ ಆರೋಗ್ಯ ಚಿಕಿತ್ಸೆ ಪಡೆಯಬಹುದೆಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ ಅವರು ಹೇಳಿದರು.
ಮೇ.13ರ ಬುಧವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಹಾಗೂ ರಾಯಚೂರು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನೇರ ಪಾವತಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ವಿಮೆ ಕಾರ್ಡ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.
ರಾಜ್ಯದಲ್ಲಿ ಮುಖ್ಯಮಂತ್ರಿಗಳಿಂದ 5,744 ಪೌರ ಕಾರ್ಮಿಕರಿಗೆ ಆರೋಗ್ಯ ಕಾರ್ಡಗಳ ವಿತರಣೆ ಮಾಡಲಾಗಿದೆ. ರಾಯಚೂರು ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಸ್ವಚ್ಚತೆಯಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದಿದೆ. ನಮ್ಮ ತಾಯಿಯು ಬೆಂಗಳೂರಿನಲ್ಲಿ ಸ್ವೀಪರ್ ಆಗಿ ಕೆಲಸ ಮಾಡಿದ್ದಾರೆ.
ಆರೋಗ್ಯ ವಿಚಾರದಲ್ಲಿ ಪೌರ ಕಾರ್ಮಿಕರು ಹೆಚ್ಚಿನ ಕಾಳಜಿ ವಹಿಸಬೇಕು. ಮುಂದಿನ ದಿನಗಳಲ್ಲಿ ಪೌರ ಕಾರ್ಮಿಕ ಅವಲಂಬಿತ ಕುಟುಂಬಕ್ಕೆ ಈ ಯೋಜನೆಯನ್ನು ವಿಸ್ತರಣೆ ಮಾಡಲಾಗುತ್ತದೆ ಎಂದರು.
ಪೌರ ಕಾರ್ಮಿಕರು ಧೈರ್ಯವಾಗಿ ಆರೋಗ್ಯ ಕಾರ್ಡ್ ಉಪಯೋಗಿಸಬಹುದಾಗಿದೆ. ಐಟಿಬಿಟಿ ಉದ್ಯೋಗಿಗಳಿಗೆ ನೀಡುವ ಸೌಲಭ್ಯಗಳನ್ನು ತಮಗೆ ನೀಡಲಾಗುತ್ತಿದೆ. ಐಪಿಡಿ ಸಾಲಪ್ಪ ವರದಿ ಪ್ರಕಾರ 36 ಅಂಶಗಳನ್ನು ಜಾರಿ ಮಾಡಲಾಗಿದೆ. ಪೌರ ಕಾರ್ಮಿಕ ಎಂಬ ಪದವನ್ನು ಐಪಿಡಿ ಸಾಲಪ್ಪ ಅವರ ವರದಿಯಿಂದ ಬಳಸಲಾಗಿದೆ. ಪಾಲಿಕೆಯ ಆಯುಕ್ತರು ಪತ್ರಿ ಮೂರು ತಿಂಗಳಿಗೊಮ್ಮೆ ಪೌರ ಕಾರ್ಮಿಕರಿಗೆ ಆರೋಗ್ಯ ಶಿಬಿರ ಆಯೋಜನೆ ಮಾಡಬೇಕು. ಪತ್ರಿ ಎರಡು ತಿಂಗಳಿಗೊಮ್ಮೆ ಸಭೆ ಮಾಡಬೇಕು ಎಂದರು.
ರಾಜ್ಯದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಸಂಪೂರ್ಣವಾಗಿ ನಿಷೇಧ ಮಾಡಲಾಗಿದೆ. ರಾಜ್ಯದ ಸಫಾಯಿ ಕಾರ್ಮಿಕರನ್ನು ಗುರುತಿಸಲಾಗಿದೆ. ರಾಯಚೂರಿನಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಗುರುತಿಸಿ ಅವರಿಗೆ ಸೌಲಭ್ಯಗಳನ್ನು ನೀಡಬೇಕು. ಅದಕ್ಕಾಗಿ ನಮ್ಮ ನಿಗಮದಲ್ಲಿ ಸಾಕಷ್ಟು ಅನುದಾನ ಲಭ್ಯವಿದೆ. ಜಿಲ್ಲೆಯಿಂದ ಫಲಾನುಭವಿಗಳ ಪಟ್ಟಿಯನ್ನು ಕಳಿಸುವಂತೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು. ಸಫಾಯಿ ಕರ್ಮಚಾರಿ





ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು. ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಮಾತನಾಡಿ, ಪೌರ ಕಾರ್ಮಿಕರನ್ನು ನೇರ ಪಾವತಿ ಪೌರ ಕಾರ್ಮಿಕರನ್ನಾಗಿ ಮಾಡಲು ಸರ್ಕಾರ ಹಂತ ಹಂತವಾಗಿ ಪ್ರಯತ್ನ ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯು ಬಹಳಷ್ಟು ಬದಲಾವಣೆ ಆಗಿದೆ. ಮುಂದೆಯೂ ಇನ್ನಷ್ಟು ಹೆಚ್ಚಿನ ಮಟ್ಟದಲ್ಲಿ ಬದಲಾವಣೆ ಮಾಡೋಣ, ಪೌರ ಕಾರ್ಮಿಕರು ಕೆಲಸದ ಎಲ್ಲಾ ಸುರಕ್ಷತಾ ಸಾಮಾಗ್ರಿಗಳನ್ನು ಬಳಸಿಕೊಂಡು ಕೆಲಸ ಮಾಡಬೇಕು ಎಂದರು.
ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹೊಪಾತ್ರ ಅವರು ಮಾತನಾಡಿ, ಹಿಂದಿನ ವರ್ಷದಲ್ಲಿ ಬ್ಯಾಂಕ್ ಆಫ್ ಬರೋಡಾದೊಂದಿಗೆ ಒಪ್ಪಂದ ಮಾಡಿಕೊಂಡು ಪೌರ ಕಾರ್ಮಿಕರಿಗೆ ವಿಮೆ ಮಾಡಿಸಲಾಗಿದೆ. ಪೌರ ಕಾರ್ಮಿಕರ ಶ್ರಮದಿಂದ ರಾಯಚೂರು ನಗರ ಸ್ವಚ್ಛವಾಗಿ ಕಾಣಲು ಸಾಧ್ಯವಾಗಿದೆ. ರಾಯಚೂರು ಉತ್ಸವ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರ ಕಾರ್ಯ ಮೆಚ್ಚುವಂತದ್ದು ಆಗಿತ್ತು. ತಮ್ಮ ಆರೋಗ್ಯದ ಕಡೆಗೂ ಹೆಚ್ಚಿನ ಗಮನ ಕೊಡುವದರ ಜೊತೆಗೆ ರಾಯಚೂರು ನಗರವನ್ನು ಸ್ವಚ್ಛ ಹಾಗೂ ಹಸಿರು ನಗರವನ್ನಾಗಿ ಮಾಡಲು ಎಲ್ಲರೂ ಶ್ರಮಿಸೋಣ ಎಂದರು.
ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ವ್ಯವಸ್ಥಾಪಕ ನಿರ್ದೇಶಕ ರವಿ ಟಿ.ಕುಮಾರ್ ಅವರು ಮಾತನಾಡಿ, ನಿಗಮದಿಂದ ಉತ್ತಮ ಗುಣಮಟ್ಟದ ಸೌಲಭ್ಯವನ್ನು ಪೌರ ಕಾರ್ಮಿಕರಿಗಾಗಿ ಜಾರಿಗೆ ತರಲಾಗಿದೆ. ಈ ಯೋಜನೆ ಜಾರಿಗೆ ಬರಲು ಸಮಾಜ ಕಲ್ಯಾಣ ಇಲಾಖೆ ಸಚಿವರು ಸೇರಿದಂತೆ ಇತರೆ ಗಣ್ಯರ ಸಹಕಾರ ಬಹಳಷ್ಟು ಇದೆ. ಪೌರ ಕಾರ್ಮಿಕರ ಆರೋಗ್ಯ ಕಾಪಾಡಲು ಸರ್ಕಾರದಿಂದ ಇದನ್ನು ಜಾರಿ ಮಾಡಲಾಗಿದೆ. ಇನ್ಫೋಸಿಸ್ 2ನೇಪುಟಕ್ಕೆ

ಮೊದಲನೇ ಪುಟದಿಂದ

# ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ : ಅಶೋಕ್ ಆಕ್ರೋಶ

15,000 ಶಿಕ್ಷಕರ ನೇಮಕಾತಿ ಮಾಡುತ್ತೇವೆ ಎಂದು ಘೋಷಿಸಿದ್ದ ನಿಮ ಸರ್ಕಾರ ಈಗ ಮೌನ ವಹಿಸಿರುವುದೇಕೆ? ಜಾಹೀರಾತುಗಳಲ್ಲಿ ಶಿಕ್ಷಣ ಪ್ರೀತಿ ತೋರಿಸಿ, ವಾಸ್ತವದಲ್ಲಿ ಶಾಲೆಗಳನ್ನು ಶಿಕ್ಷಕರಿಲ್ಲದೆ ಬಿಟ್ಟುಬಿಡುವುದು ಯಾವ ರೀತಿಯ ಸಾಮಾಜಿಕ ನ್ಯಾಯ?ಹಣದ ಕೊರತೆಯೇ? ಅಥವಾ ಕಾಳಜಿಯ ಕೊರತೆಯೇ? ಗ್ಯಾರೆಂಟಿ ಅನುಷ್ಠಾನ ಸಮಿತಿಗಳ ಹೆಸರಿನಲ್ಲಿ ಅತೃಪ್ತ ಕಾಂಗ್ರೆಸ್ಸಿಗರಿಗೆ ಗಂಜಿ ಕೇಂದ್ರ ನಡೆಸುವುದಕ್ಕೆ ನೂರಾರು ಕೋಟಿ ಇದೆ, ಐಷಾರಾಮಿ ಸಮಾವೇಶಗಳಿಗೆ ಹತ್ತಾರು ಕೋಟಿ ಹಣ ಇದೆ, ಅಲ್ಪಸಂಖ್ಯಾತರ ಓಲೈಕೆಗೆ ಹಣ ಇದೆ.

ಆದರೆ ಮಕ್ಕಳಿಗೆ ಅಕ್ಷರ ಕಲಿಸುವ ಶಿಕ್ಷಕರ ನೇಮಕಾತಿಗೆ ಮಾತ್ರ ಖಜಾನೆ ಖಾಲಿಯೇ? ಇದು ಆರ್ಥಿಕ ಸಮಸ್ಯೆಯಲ್ಲ? ಇದು ಇಚ್ಛಾಶಕ್ತಿಯ ಕೊರತೆ ಎಂದು ಅವರು ಕಿಡಿಕಾರಿದ್ದಾರೆ.
ಶಿಕ್ಷಕರಿಲ್ಲದ ಶಾಲೆ ಎಂದರೆ ಅದು ಕೇವಲ ಖಾಲಿ ಕಟ್ಟಡ.ಅಲ್ಲಿ ಶಿಕ್ಷಣ ಸಾಯುತ್ತದೆ. ಅಲ್ಲಿ ಬಡ ಮಕ್ಕಳ ಭವಿಷ್ಯ ಕತ್ತಲೆಯಾಗುತ್ತದೆ.ಅಲ್ಲಿ ಸಮಾಜದ ಸಮಾನತೆ ಕುಸಿಯುತ್ತದೆ.ಇಂದು ಸರ್ಕಾರಿ ಶಾಲೆಗಳನ್ನು ದುರ್ಬಲಗೊಳಿಸಿ, ನಾಳೆ “ವಿದ್ಯಾರ್ಥಿಗಳೇ ಇಲ್ಲ” ಎಂಬ ನೆಪದಲ್ಲಿ ಅವುಗಳಿಗೆ ಬೀಗ ಹಾಕುವ ಹುನ್ನಾರ ನಡೆಯುತ್ತಿದೆಯೇ ಎಂಬ ಅನುಮಾನ ಜನರಲ್ಲಿ ಮೂಡಿದೆ.

ರಾಜ್ಯದ ಅಕ್ಷರ ದಾಸೋಹವನ್ನು ಹಾಳುಮಾಡುತ್ತಿರುವ ಈ ಕಾಂಗ್ರೆಸ್ ಸರ್ಕಾರಕ್ಕೆ ಕರ್ನಾಟಕದ ಜನ ತಕ್ಕ ಉತ್ತರ ನೀಡಲಿದ್ದಾರೆ.ತಕ್ಷಣವೇ ಪೂರ್ಣ ಪ್ರಮಾಣದ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು. ಸರ್ಕಾರಿ ಶಾಲೆಗಳನ್ನು ವ್ಯವಸ್ಥಿತವಾಗಿ ಮುಚ್ಚುವ ಹುನ್ನಾರವನ್ನು ನಿಲ್ಲಿಸಬೇಕು ಎಂದು ಅಶೋಕ್ ಆಗ್ರಹಿಸಿದ್ದಾರೆ.

# ಮಾಹಿತಿ ನೀಡದ ಕಲ್ಬುರ್ಗಿ ಜಿ.ಪಂ ಉಪ ಕಾರ್ಯದರ್ಶಿ ಸೇರಿ 17 ಮಂದಿ ಅಧಿಕಾರಿಗಳಿಗೆ ದಂಡ: ಬಿ.ವೆಂಕಟಸಿಂಗ್

ಕಲ್ಬುರ್ಗಿ ಹಾಗೂ ಕೊಪ್ಪಳದಲ್ಲಿ ಕಾರ್ಯಗಾರ ನಡೆಸಿದ್ದು ಈ ತಿಂಗಳ 30 ರಂದು ವಿಜಯನಗರ ಜಿಲ್ಲೆಯಲ್ಲಿ ಕಾರ್ಯಗಾರ ಹಮ್ಮಿಕೊಂಡಿರುವುದಾಗಿ ತಿಳಿಸಿದ್ದಾರೆ. ಇದೆ ವೇಳೆ ವಡೆಗೇರ ತಾಲೂಕ ಉಲ್ಲೆಸುಗೂರು ಗ್ರಾಪಂ ಪಿ. ಡಿ. ಓ, ಸೇಡಂ ತಾಲೂಕ ಅಡಕಿ ಗ್ರಾಪಂ ಪಿ. ಡಿ ಓ, ಜೇವರ್ಗಿ ತಾಲೂಕ ನೆಲೋಗಿ ಗ್ರಾಪಂ ಪಿ. ಡಿ. ಓ.ಅವರಿಂದ ಅನುಕ್ರಮವಾಗಿ, 5 ಸಾವಿರ,15 ಸಾವಿರ, 10 ಸಾವಿರ,ಸೇರಿ 30 ಸಾವಿರ ದಂಡ ವಸೂಲಿ ಮಾಡಲಾಗಿದೆ.
ಕಾರಿನಲ್ಲಿ ತುಂಬಿ ಕೊಂಡು ಬಂದ ಮಾಹಿತಿ ಬಂಡಲ್: ಜೇವರ್ಗಿ ತಾಲೂಕ ಹರ್ನಲ್ ಕೆ. ಗ್ರಾಮದ ಬಾಬು ದೊಡ್ಡಮನಿ ಅವರು ಕೇಳಿದ ಜೇವರ್ಗಿ ತಾಲೂಕ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಗೆ ಕೇಳಿದ ಮಾಹಿತಿ ಕಾರಿ ನಲ್ಲಿ ತುಂಬಿ ಕೊಂಡು ಬಂದು ವಿಚಾರಣೆ ವೇಳೆ ನೀಡಲಾಯಿತು. ಆಯೋಗ ಮಾಡಿದ ಆದೇಶ ದಂತೆ ಜೇವರ್ಗಿ ಸಿ.ಡಿ.ಪಿ.ಓ ಭೀಮರಾಯ ತಮ್ಮ ಕಚೇರಿಯಲ್ಲಿ ಲಭ್ಯ ಮಾಹಿತಿ ಕಲೆ ಹಾಕಿ ಸುಮಾರ 20ಕ್ಕೂ ಹೆಚ್ಚು ಬಂಡಲ ಕಾರಿನಲ್ಲಿ ತುಂಬಿಕೊಂಡು ಬಂದು ಅರ್ಜಿದಾರನಿಗೆ ನೀಡಿದರು.

# ಪೌರ ಕಾರ್ಮಿಕರು ಆರೋಗ್ಯ ವಿಮೆಯ ಸೌಲಭ್ಯ ಪಡೆಯಿರಿ: ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ

ವಿಪ್ರೋ ಸಂಸ್ಥೆಯ ಉದ್ಯೋಗಿಗಳಿಗೆ ನೀಡುವ ಸೌಲಭ್ಯವನ್ನು ನಮ್ಮ ಪೌರ ಕಾರ್ಮಿಕರಿಗೆ ನೀಡಲಾಗುತ್ತಿದೆ. 5 ಲಕ್ಷ ರೂ. ವರಗೆ ಉಚಿತವಾಗಿ ನಗರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಒಟ್ಟು ಮೂರು ಸಾವಿರ ರೋಗಕ್ಕೆ ಚಿಕಿತ್ಸೆ ಪಡೆಯಬಹುದಾಗಿದೆ. ಪೌರ ಕಾರ್ಮಿಕರು ಈ ಆರೋಗ್ಯ ಕಾರ್ಡ್ಗಳನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಕೆಲಸ ಪೌರ ಕಾರ್ಮಿಕರು ಮಾಡಬೇಕು ಎಂದರು.

ಆರೋಗ್ಯ ವಿಮೆ ಕಾರ್ಡ್, ಸಮವಸ್ತ್ರ ವಿತರಣೆ: ರಾಯಚೂರು ಮಹಾನಗರ ಪಾಲಿಕೆಯ ನೇರ ಪಾವತಿ ಪೌರ ಕಾರ್ಮಿಕರಾದ ಆರ್.ಹನುಮಂತ, ರಾಮಪ್ಪ, ಸಣ್ಣ ನರಸಿಂಹಲು, ನಾಗಮ್ಮ, ಜಂಬಲಮ್ಮ, ಲವ, ನಾಗಪ್ಪ, ಮುಖೇಶ್, ಜಿಂದಮ್ಮ, ಹೊನ್ನಮ್ಮ ಹಾಗೂ ಸಮವಸ್ತ್ರವನ್ನು ನರಸಪ್ಪ, ರಮೇಶ, ನಾಗಪ್ಪ, ಮೋನಪ್ಪ, ತಿಮ್ಮಪ್ಪ, ನರಸಪ್ಪ, ಮಾರೆಪ್ಪ, ದೊಡ್ಡ ನರಸಪ್ಪ, ನರಸಿಂಹಲು, ಎನ್.ಪ್ರಸಾದ್ ಕುಮಾರ್, ಸಣ್ಣ ನರಸಪ್ಪ ಯಲ್ಲಪ್ಪ, ರಾಜಶೇಖರ, ಆಂಜನೇಯ, ರೆಡ್ಡೆಪ್ಪ, ಸುಶೀಲಮ್ಮ ಅವರಿಗೆ ವಿತರಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಲಾಯಿತು. ಇದಕ್ಕೂ ಮೊದಲು ನಡೆದ ಶಿಬಿರದಲ್ಲಿ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಲಾಯಿತು.
ಈ ಸಂದರ್ಭದಲ್ಲಿ ಪಾಲಿಕೆ ಕಂದಾಯ ಆಯುಕ್ತ ಶರಣಪ್ಪ, ಪಾಲಿಕೆ ಸದಸ್ಯ ಕಾರ್ಯದರ್ಶಿ ಕೃಷ್ಣ, ಕಂದಾಯ ಅಧಿಕಾರಿ ರವಿ ಅಂಗಡಿ, ಡಿ.ಕುಮಾರ್, ಪಾಲಿಕೆಯ ಕಂದಾಯ ಆಯುಕ್ತ ಶರಣಪ್ಪ, ಪಾಲಿಕೆಯ ಜೋನಲ್ 01ರ ಉಪ ಆಯುಕ್ತ ಮಲ್ಲಿಕಾರ್ಜುನ, ಪಾಲಿಕೆಯ ಪರಿಸರ ಅಭಿಯಂತರ ಜಯಪಾಲ್ ರೆಡ್ಡಿ, ವಿಮೆ ಸಂಸ್ಥೆಯ ವಿನೋದ ಹಾಗೂ ಪೌರ ಕಾರ್ಮಿಕರು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

# ನಟ ದಿಲೀಪ್ ರಾಜ್ ವಿಧಿವಶ: ಗಣ್ಯರ ಕಂಬನಿ

ಕಿರುತೆರೆಯಲ್ಲಿ ಮನೆಮಾತಾದ ನಟ
ದಿಲೀಪ್ ರಾಜ್ ಮೊದಲಿಗೆ ‘ಕಂಬದ ಮನೆ’ ಧಾರಾವಾಹಿ ಮೂಲಕ ಕನ್ನಡ ಕಿರುತೆರೆಗೆ ಪರಿಚಿತರಾದರು. ನಂತರ ‘ಜನನಿ’, ‘ಅರ್ಧ ಸತ್ಯ’, ‘ರಂಗೋಲಿ’, ‘ಕುಂಕುಮ ಭಾಗ್ಯ’, ‘ಮಾಂಗಲ್ಯ’, ‘ಪ್ರೀತಿಗಾಗಿ’ ಮುಂತಾದ ಧಾರಾವಾಹಿಗಳ ಮೂಲಕ ಪ್ರೇಕ್ಷಕರ ಮನಗೆದ್ದರು. ವಿಭಿನ್ನ ಪಾತ್ರಗಳನ್ನು ನಿರ್ವಹಿಸುವ ಸಾಮರ್ಥ್ಯದಿಂದ ಅವರು ಮನೆಮಾತಾದರು. ನಂತರ ‘ರಥಸಪ್ತಮಿ’ ಧಾರಾವಾಹಿಯ ಮೂಲಕ ಮತ್ತೆ ಕಿರುತೆರೆಗೆ ಭರ್ಜರಿ ಕಮ್‌ಬ್ಯಾಕ್ ಮಾಡಿದ್ದರು. ವಿಶೇಷವಾಗಿ ಹಿಟ್ಲರ್ ಕಲ್ಯಾಣ ಧಾರಾವಾಹಿಯಲ್ಲಿ ನಾಯಕನಾಗಿ ಅಭಿನಯಿಸಿ ಅಪಾರ ಜನಪ್ರಿಯತೆ ಗಳಿಸಿದ್ದರು. ಅವರ ನಟನೆ, ಸಂಭಾಷಣೆ ಹೇಳುವ ಶೈಲಿ ಹಾಗೂ ಪರಿಪಕ್ವ ಅಭಿನಯ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿತ್ತು.

ಸಿನಿಮಾರಂಗದಲ್ಲಿ ಗಮನಾರ್ಹ ಸಾಧನೆ
2005ರಲ್ಲಿ ಬಿಡುಗಡೆಯಾದ ಬಾಯ್ ಫ್ರೆಂಡ್ ಚಿತ್ರದ ಮೂಲಕ ದಿಲೀಪ್ ರಾಜ್ ಬೆಳ್ಳಿತೆರೆಗೆ ಕಾಲಿಟ್ಟರು. ಆರಂಭದಲ್ಲಿ ನಾಯಕ ನಟನಾಗಿ ಕಾಣಿಸಿಕೊಂಡರೂ, ನಂತರ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ ತಮ್ಮದೇ ಛಾಪು ಮೂಡಿಸಿದ್ದರು. 2007ರಲ್ಲಿ ಬಿಡುಗಡೆಯಾದ ಮಿಲನ ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಜೊತೆ ಅಭಿನಯಿಸಿದ ಬಳಿಕ ಅವರಿಗೆ ದೊಡ್ಡ ಮಟ್ಟದ ಜನಪ್ರಿಯತೆ ದೊರೆಯಿತು. ವಿಶೇಷವಾಗಿ ನೆಗೆಟಿವ್ ಶೇಡ್‌ನ ಪಾತ್ರದಲ್ಲಿ ಅವರು ಮೆಚ್ಚುಗೆ ಗಳಿಸಿದ್ದರು. ಇದರ ಜೊತೆಗೆ ‘7 ಓ ಕ್ಲಾಕ್’, ‘ಕ್ಷಣ ಕ್ಷಣ’, ಯು–ಟರ್ನ್ ಸೇರಿದಂತೆ ಅನೇಕ ಸಿನಿಮಾಗಳಲ್ಲಿ ಪೋಷಕ ಹಾಗೂ ಪ್ರಮುಖ ಪಾತ್ರಗಳಲ್ಲಿ ನಟಿಸಿ ತಮ್ಮ ಅಭಿನಯ ಕೌಶಲ್ಯ ತೋರಿಸಿದ್ದರು.

ಯಶಸ್ವಿ ನಿರ್ಮಾಪಕರಾಗಿಯೂ ಗುರುತು
ನಟನೆ ಮಾತ್ರವಲ್ಲದೆ ನಿರ್ಮಾಣ ಕ್ಷೇತ್ರದಲ್ಲೂ ದಿಲೀಪ್ ರಾಜ್ ಯಶಸ್ಸು ಕಂಡಿದ್ದರು. ತಮ್ಮದೇ ‘ಡಿ.ಆರ್. ಕ್ರಿಯೇಷನ್ಸ್’ ಬ್ಯಾನರ್ ಮೂಲಕ ಹಲವು ಧಾರಾವಾಹಿಗಳನ್ನು ನಿರ್ಮಿಸಿದ್ದರು. ಕೃಷ್ಣ ರುಕ್ಕು ಧಾರಾವಾಹಿಯ ನಿರ್ಮಾಪಕರಾಗಿದ್ದ ಅವರು, ಹೊಸ ಕಲಾವಿದರಿಗೆ ಅವಕಾಶ ನೀಡುವ ಮನೋಭಾವದಿಂದಲೂ ಗುರುತಿಸಿಕೊಂಡಿದ್ದರು. ‘ಹಿಟ್ಲರ್ ಕಲ್ಯಾಣ’ ಧಾರಾವಾಹಿಯ ನಿರ್ಮಾಪಕರಾಗಿಯೂ ಅವರು ದೊಡ್ಡ ಯಶಸ್ಸು ಕಂಡಿದ್ದರು.

ಡಬ್ಬಿಂಗ್ ಮತ್ತು ರಂಗಭೂಮಿಯಲ್ಲೂ ಸಕ್ರಿಯ
ದಿಲೀಪ್ ರಾಜ್ ಕೇವಲ ನಟ ಅಥವಾ ನಿರ್ಮಾಪಕರಷ್ಟೇ ಅಲ್ಲ; ಅವರು ಉತ್ತಮ ಕಂಠದಾನ ಕಲಾವಿದರೂ ಆಗಿದ್ದರು. ಅನೇಕ ಧಾರಾವಾಹಿ ಹಾಗೂ ಸಿನಿಮಾಗಳಿಗೆ ಧ್ವನಿ ನೀಡಿದ್ದರು. ರಂಗಭೂಮಿಯೊಂದಿಗಿನ ಅವರ ನಂಟು ಕೊನೆಯವರೆಗೂ ಮುಂದುವರಿದಿತ್ತು. ಕಲೆಯ ಮೇಲೆ ಅಪಾರ ಪ್ರೀತಿ ಹೊಂದಿದ್ದ ಅವರು, ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಗುಣದಿಂದ ಸಹೋದ್ಯೋಗಿಗಳ ಮನಸ್ಸು ಗೆದ್ದಿದ್ದರು.

ಚಿತ್ರರಂಗದ ಗಣ್ಯರಿಂದ ಸಂತಾಪ
ದಿಲೀಪ್ ರಾಜ್ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಕನ್ನಡ ಚಿತ್ರರಂಗದ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಸಂತಾಪ ಸೂಚಿಸಿದ್ದಾರೆ. ಕಿರುತೆರೆ ಹಾಗೂ ಸಿನಿಮಾ ಕ್ಷೇತ್ರದ ಅನೇಕ ಕಲಾವಿದರು ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಧೈರ್ಯ ಹೇಳಿದ್ದಾರೆ ಎನ್ನಲಾಗಿದೆ. ಅಭಿಮಾನಿಗಳು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಅವರ ಹಳೆಯ ದೃಶ್ಯಗಳು, ಸಂಭಾಷಣೆಗಳು ಹಾಗೂ ನೆನಪುಗಳನ್ನು ಹಂಚಿಕೊಂಡು ಕಂಬನಿ ಮಿಡಿಯುತ್ತಿದ್ದಾರೆ.

ದಿಲೀಪ್ ರಾಜ್ ಅವರ ಅಗಲಿಕೆಯಿಂದ ಕನ್ನಡ ಕಿರುತೆರೆ ಮತ್ತು ಸಿನಿಮಾ ಕ್ಷೇತ್ರ ಒಬ್ಬ ಪ್ರತಿಭಾವಂತ ನಟನನ್ನು ಮಾತ್ರವಲ್ಲ, ಸ್ನೇಹಪರ ವ್ಯಕ್ತಿತ್ವದ ಕಲಾವಿದನನ್ನೂ ಕಳೆದುಕೊಂಡಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

# ಬೋಗಸ್ ದಾಖಲೆಯಡಿ ಭೂ ಒಡೆತನ ಯೋಜನೆ ಸೌಲಭ್ಯ: ತನಿಖೆಗೆ ಜೈ ಕನ್ನಡಿಗರ ಸೇನೆ ಆಗ್ರಹ

ಸೃಷ್ಟಿಸಿ ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ಅರ್ಜಿ ಸಲ್ಲಿಸಿ ಭೂ ಒಡೆತನ ಯೋಜನೆಯ ಸೌಲಭ್ಯ ಪಡೆದಿದ್ದಾರೆ ಈ ಬಗ್ಗೆ ತನಿಖೆ ಕೈಗೊಳ್ಳುವಂತೆ ಮನವಿಯಲ್ಲಿ ದೂರಲಾಗಿದೆ.

ಈ ಕುರಿತು ಈ ಹಿಂದೆಯೇ ಕೆಲವು ಸಂಘಟನೆ ಸಂಬಂಧಿಸಿದ ನಿಗಮಕ್ಕೆ ದೂರು ನೀಡಿದ್ದರೂ ಜಿಲ್ಲಾ ವ್ಯವಸ್ಥಾಪಕರು ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಒಂದೇ ಗ್ರಾಮದಲ್ಲಿ ಆರು ಜನ ಫಲಾನುಭವಿಗಳಿಗೆ ಭೂ ಒಡೆತನ ಯೋಜನೆಯಡಿ ಜಮೀನು ನೋಂದಣಿ ಮಾಡಿರುವುದು ಸರ್ಕಾರಕ್ಕೆ ವಂಚನೆ ಮಾಡುವಂತಾಗಿದೆ ಎಂದು ಸಂಘಟನೆ ಆರೋಪಿಸಿದೆ.

ಹೀಗಾಗಿ, ಬೋಗಸ್ ಫಲಾನುಭವಿಗಳ ನೋಂದಣಿ ರದ್ದುಪಡಿಸಿ ನಿಜವಾದ ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ಕಲ್ಪಿಸಬೇಕು. ಅಲ್ಲದೆ, ತಪ್ಪು ದಾಖಲೆ ನೀಡಿದ ಅಧಿಕಾರಿಗಳು, ಬೀಳವಾರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಬೋಗಸ ದಾಖಲೆ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು

# ಉಡಮಗಲ್ ಖಾನಾಪುರ, ಯಾಪಲದಿನ್ನಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರಾಷ್ಟ್ರೀಯ ಮಟ್ಟದ ಎನ್‌ಕ್ಯೂಎಎಸ್ ಮೌಲ್ಯ ಮಾಪನದಲ್ಲಿ ಸಾಧನೆ

**ರಾಯಚೂರು ಮೇ.13:** ರಾಯಚೂರು ಜಿಲ್ಲೆಯ ಉಡಮಗಲ್ ಖಾನಾಪುರ ಹಾಗೂ ಯಾಪಲದಿನ್ನಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡಗಳ ರಾಷ್ಟ್ರೀಯ ಮಟ್ಟದ ಮೌಲ್ಯಮಾಪನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಗಮನಾರ್ಹ ಸಾಧನೆ ಮಾಡಿದ್ದು, ಇದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಸಂತಸ ಹಂಚಿಕೊಂಡಿದ್ದಾರೆ.
ಪ್ರಾಥಮಿಕ ಆರೋಗ್ಯ ಕೇಂದ್ರ ಉಡಮಗಲ್ ಖಾನಾಪೂರಗೆ ರಾಷ್ಟ್ರೀಯ ಮಟ್ಟದ ತಂಡದ ಡಾ.ಗಿರೀಶ್ ಹಾಗೂ ಡಾ.ಮೈನುದೀನ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಯಾಪಲದಿನ್ನಿಗೆ ರಾಷ್ಟ್ರಮಟ್ಟದ ಮೌಲ್ಯಮಾಪಕರಾದ ವಿನಿತಾ ಆರ್. ಹಾಗೂ ಅಶೋಕ್ ಅವರು ಕೈಗೊಂಡ ಸಮಗ್ರ ಮೌಲ್ಯಮಾಪನದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಉಡಮಗಲ್ ಖಾನಾಪೂರ ಶೇಕಡ 91.31 ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಯಾಪಲದಿನ್ನಿ ಶೇಕಡ 88.55 ಅಂಕಗಳೊಂದಿಗೆ ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಯಾಗಿದೆ.
ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮೂಲ ಸೌಕರ್ಯ, ರೋಗಿ ಸ್ನೇಹಿ ಸೇವೆಗಳು, ಆಸ್ಪತ್ರೆಯ ಸ್ವಚ್ಛತೆ, ಔಷಧಗಳ ಲಭ್ಯತೆ, ತುರ್ತು ಚಿಕಿತ್ಸಾ ವ್ಯವಸ್ಥೆ, ದಾಖಲೆ ನಿರ್ವಹಣೆ ಸೇರಿದಂತೆ ಹಲವು ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿತ್ತು. ಈ ಎಲ್ಲ ವಿಭಾಗಗಳಲ್ಲಿ ಉತ್ತಮ ಕಾರ್ಯನಿರ್ವಹಣೆ ತೋರಿದ ಪರಿಣಾಮ ಉನ್ನತ ಅಂಕಗಳನ್ನು ಪಡೆದುಕೊಳ್ಳಲಾಗಿದೆ ಎಂದರು.
ಜನಪ್ರತಿನಿಧಿಗಳು, ಶಾಸಕರು ಮತ್ತು ಸಂಸದರು, ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತದಿಂದ ದೊರೆತ ಮಾರ್ಗದರ್ಶನ ಮತ್ತು ಬೆಂಬಲವೂ ಈ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಇದಕ್ಕಾಗಿ ಜಿಲ್ಲಾ ಎನ್ಫೋರ್ಸ್ಮೆಂಟ್ ಅಧಿಕಾರಿಗಳು ಡಾ.ಶಿವಕುಮಾರ, ತಾಲ್ಲೂಕು ಆರೋಗ್ಯಾಧಿಕಾರಿಗಳು ಡಾ.ಅಮೃತ್, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಫರಹ್ ನಸ್ರೀನ್, ಡಾ.ಅರುಣ, ಡಾ.ಶಿವಶರಣಪ್ಪ, ಆಯುಷ್ ವೈದ್ಯಾಧಿಕಾರಿಗಳು ಜಿಲ್ಲಾ ಗುಣಮಟ್ಟ ಭರವಸೆ ಸಲೆಹೆಗಾರರಾದ ಹರೀಶ್ ಪತಂಗೆ, ಸಿಬ್ಬಂದಿಯವರಾದ ಬದರಿ ನಾಥ, ಪ್ರ.ದ.ಸ, ಖಲೀಲ್ ಅಹ್ಮದ್, ಶುಶ್ರೂಷಣಾಧಿಕಾರಿಗಳಾದ ಸ್ವೀಟ್ ಮೇರಿ, ಪ್ರೇಮ ಕುಮಾರಿ, ಮೌನೇಶ್ ಸೇರಿದಂತೆ ಎಲ್ಲ ಸಿಬ್ಬಂದಿಗಳ ಕಠಿಣ ಪರಿಶ್ರಮದಿಂದ ಈ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ಸಾಧ್ಯವಾಯಿತು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಮೇ.18ರಿಂದ 20ರವರೆಗೆ ತರಬೇತಿ ಕಾರ್ಯಾಗಾರ

**ರಾಯಚೂರು ಮೇ.13:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ಸುಧಾರಿತ ದತ್ತಾಂಶ ವಿಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯನ್ನು ಮೇ.18ರಿಂದ 20ರವರೆಗೆ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ.
ಈ ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಉಪನ್ಯಾಸಗಳನ್ನು ನೀಡಲಿದ್ದು, ಆಸಕ್ತ ವಿಜ್ಞಾನ ಪದವಿ, ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು ಅಥವಾ ಪ್ರಾಧ್ಯಾಪಕರು ಹಾಗೂ ವಿಜ್ಞಾನಾಸಕ್ತರು ಭಾಗವಹಿಸಬಹುದಾಗಿದೆ.
ಆಸಕ್ತ ಪ್ರತಿನಿಧಿಗಳು ದಿನಾಂಕ: 16/05/2026ರಳೊಗಾಗಿ Google Form: https://forms.gle/Dyf9KFQ8ShnRLDHH6 ಅಥವಾ ಕಾರ್ಯಾಗಾರದ ಸಂಯೋಜಕರಾದ ಶ್ರೀನಿವಾಸು ವಿ.ಕೆ.ವೈಜ್ಞಾನಿಕಾಧಿಕಾರಿ ಇವರ ಮೊಬೈಲ್ ಸಂಖ್ಯೆ: 9620767819ಗೆ ಸಂಪರ್ಕಿಸಬಹುದಾಗಿದೆ ಅಥವಾ ಅಕಾಡೆಮಿಯ ವೆಬ್ ಸೈಟ್ ವಿಳಾಸ: https://kstacademy.in ವೀಕ್ಷಿಸಬಹುದಾಗಿದೆ ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಂಡ ಪಾವತಿಸದೇ ಕಾರಾಗೃಹದಲ್ಲಿ ಉಳಿದ ಬಂದಿಗೆ ನೆರವಿನ ಹಸ್ತ



**ಕಲಬುರಗಿ,ಮೇ.13:** ದಂಡದ ಹಣ ಪಾವತಿಸದೇ ಕಾರಾಗೃಹದಲ್ಲಿಯೇ ಉಳಿದ ಬಂದಿಗೆ ಮಾನವೀಯತೆ ಮೇರೆಗೆ ಹಣ ಪಾವತಿಸಿ ಸಹಕರಿಸಿದ ಘಟನೆ ನಡೆದಿದೆ.

ಕೇಂದ್ರ ಕಾರಾಗೃಹದ ಶಿಕ್ಷಾ ಬಂದಿ ರಮೇಶ್ ಶಿವರಾಯ ಕಲಗೂರ್ತಿ ಎಂಬಾತನು ದಂಡದ ಹಣ ಕಟ್ಟಲು ಅರ್ಥಿಕವಾಗಿ ದುರ್ಬಲರಾದ ಕಾರಣ ಹಣ ಹೊಂದಿಸಲು ಸಾಧ್ಯವಾಗಿರಲಿಲ್ಲ. ಇದನ್ನು ಈ ಸಂಸ್ಥೆಯ ಪ್ರಭಾರಿ ಮುಖ್ಯ ಅಧೀಕ್ಷಕ ರಾಕೇಶ್ ಕಾಂಬಳೆ ಗಮನಿಸಿ ಸ್ಥಳೀಯ ಸಂಸ್ಥೆ ಜಮೀಯತ್ ಉಲಮಾ ಸೊಸೈಟಿಯನ್ನು ಸಂಪರ್ಕಿಸಿ ದಂಡ ಮೊತ್ತ ರೂ. 18 ಸಾವಿರ ರೂ ಮೊತ್ತವನ್ನು ಪಾವತಿಸಲು ಕೋರಲಾಗಿತ್ತು.


ಅದರಂತೆ ಅವರುಗಳು ಅರ್ಥಿಕವಾಗಿ ದುರ್ಬಲರಾದ ಬಂದಿಗಳ ದಂಡದ ಹಣ ಪಾವತಿಸಿ ಸಹಕರಿಸಿ ಮಾನವೀಯುತೆ ಮೆರೆದಿದ್ದಾರೆ. ಹಣ ಪಾವತಿಸುವ ಸಂದರ್ಭದಲ್ಲಿ ಪ್ರಭಾರಿ ಮುಖ್ಯ ಅಧೀಕ್ಷಕ ರಾಕೇಶ್ ಕಾಂಬಳೆ, ಜಮೀಯತ್ ಉಲಮಾ ಸೊಸೈಟಿಯ ಮಹ್ಮದ್ ಶರೀಫ್ ಮಹ್ಮದ್ ಇಸ್ಮಾಯಿಲ್, ಮಹ್ಮದ್ ವಾಜೀದ್ ಇಮಾಮ್ ಪಟೇಲ್, ಸಯ್ಯಾದ್ ಸಾಧೀಕ್ ಸಯ್ಯಾದ್ ಅಬ್ದುಲ್ ರಶೀದ್, ಜಾಕಿಯೂದ್ದೀನ್ ನಸಿರೂದ್ದೀನ್, ಜೈಲರ್‌ಗಳಾದ ಸಾಗರ ಪಾಟೀಲ್, ಶ್ರೀಮಂತಗೌಡ ಪಾಟೀಲ್, ಮುಖ್ಯ ವೀಕ್ಷಕರಾದಸಲೀಂ ಮುಲ್ಲಾ ಹಾಗೂ ಸಂಸ್ಥೆಯ ಶಿಕ್ಷಕ ನಾಗರಾಜ ಮೂಲಗೆ ಭಾಗವಹಿಸಿದರು.

# ಹೃದಯ ಕರಗಿಸಿ ಕಣ್ಣ ತೋಯಿಸಿ ಮನಕುಲುಕವ ಕಥೆ "ಸೋನು"

ಈ ಜಗತ್ತೆ ಹೀಗೆ ಎಲ್ಲವೂ ಅಸಮತೋಲನ ಒಂದು ಕಡೆ ಬೆಟ್ಟ ಗುಡ್ಡಗಳಿಂದ ಕೂಡಿದ ಘಟ್ಟ ಪ್ರದೇಶವಿದ್ದರೆ ಮತ್ತೊಂದು ಕಡೆ ಕಡಿದಾದ ಇಳಿಜಾರಿನ ಪ್ರದೇಶವಿದೆ. ಒಂದು ಕಡೆ ನೀರಿನಿಂದ ತುಂಬಿದ್ದರೆ ಮತ್ತೊಂದು ಕಡೆ ಕಲ್ಲು ಬಂಡೆಗಳಿಂದ ತುಂಬಿದ ಪ್ರದೇಶ, ಒಂದು ಕಡೆ ನಿತ್ಯ ಮಳೆ ಬೀಳುವ ತಂಪಾದ ವಾತಾವರಣವಿದ್ದರೆ ಮತ್ತೊಂದು ಕಡೆ ಬಿರು ಬಿಸುಲಿನ ಬೇಗೆ ಇದು ಭೌತಿಕ ಪ್ರಪಂಚದ ಅಸಮತೋಲನವಾದರೆ ಜೀವ ಪ್ರಪಂಚದಲ್ಲಿ ಕೆಲವರು ಅತಿ ಶ್ರೀಮಂತಿಕೆಯಿಂದ ಕೂಡಿದ್ದರೆ ಇನ್ನು ಕೆಲವರು ಕಡು ಬಡತನದಲ್ಲಿ ನೊಂದು ಬೆಂದು ಬಸವಳಿದಿರುತ್ತಾರೆ. ಅಂತೆಯೇ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದವರಾದ ತಮ್ಮಣ್ಣ ಬೀಗಾರ ಅವರು ಬರೆದ ಸೋನು ಕಿರು ಕಾದಂಬರಿಯು ಓದುಗರ ಹೃದಯ ಕರಗಿಸಿ ಕಣ್ಣುಗಳ್ಳನ್ನು ತೋಯಿಸಿ ಮನಕುಲುಕುವಂತದ್ದಾಗಿದ್ದು, ಸೋನು ತನ್ನ ಹಸಿವಿನ ಚೀಲವನ್ನು ತುಂಬಿಸಿಕೊಳ್ಳುಲು ಪಟ್ಟ ಕಷ್ಟದ ಕಥೆಯಾಗಿದೆ.

ತಮ್ಮಣ್ಣ ಬೀಗಾರ ಅವರು ಶಿಕ್ಷಕ ವೃತ್ತಿಯಿಂದ ನಿವೃತ್ತರಾಗಿದ್ದು, ಮಕ್ಕಳೊಂದಿಗಿನ ಅನುದಿನದ ಒಡನಾಟದಿಂದ ಮಕ್ಕಳ ಬಾಲ್ಯದ ಹುಡುಗಾಟ, ಹುಡುಕಾಟ, ಕೌತುಕ, ತುಂಟತನ, ಮುಗ್ಧತೆಯಂತಹ ಮಕ್ಕಳ ಮನಸ್ಸಿನ ಆಳದಲ್ಲಿರುವ ಮಗುತನದ ಭಾವವನ್ನು ಅರಿತವರಾಗಿದ್ದಲ್ಲದೆ ತಮ್ಮ ಬಾಲ್ಯವನ್ನು ಇಣಿಕಿ ತಾವು ಮಗುವಾಗಿ ಮಕ್ಕಳ ಸಾಹಿತ್ಯ ಲೋಕಕ್ಕೆ ಹಲವಾರು ಕೃತಿಗಳನ್ನು ನೀಡಿದ್ದಾರೆ. ಅದರಲ್ಲಿ ಬಾವುಲಿ ಗುಹೆ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ ಪ್ರಶಸ್ತಿ ದೊರಕಿರುವುದು ತಮ್ಮಣ್ಣ ಬೀಗಾರ ಅವರ ಸಾಹಿತ್ಯದ ಗಟ್ಟಿತನದ ಧ್ಯೂತಕವಾಗಿದೆ. ಈಗ ಸೋನು ಕಿರು ಕಾದಂಬರಿಯ ಮೂಲಕ ಓದುಗರ ಕಣ್ಣಾಲಿಗಳು ತೋಯ್ಯುವಂತೆ ಮಾಡಿದ್ದಾರೆ.

ಹೌದು, ಸೋನು ಕಾದಂಬರಿ ಕಿರಿದಾಗಿದ್ದರು ಒಂದು ಮಹತ್ವಪೂರ್ಣ ಕಥಾವಸ್ತುವಿನಿಂದ ಬದುಕಿನ ವಾಸ್ತವತೆಯನ್ನು ತೆರೆದಿಡುತ್ತದೆ. ಕಥಾ ನಾಯಕ ಸೋನು ಹಸಿವಿನ ಚೀಲ ತುಂಬಿಕೊಳ್ಳಲು ಬಾಲ್ಯದಲ್ಲಿಯೇ ಅನುಭವಿಸಿದ ನೋವಿನ ಕಥೆಯಾಗಿದೆ, ಶಾಲೆಗೆ ಸೇರಿ ಓದು ಕಲಿಯಬೇಕೆಂದು ಹಂಬಲವಿದ್ದರೂ ಹಸಿವನ್ನು ತೀರಿಸಿಕೊಳ್ಳಲು ಶಾಲೆ ಬಿಟ್ಟ ಅಸಹಾಯಕತೆಯ ವ್ಯಥೆಯಾಗಿದೆ, ಸೋನು ಶಾಲೆಗೆ ಹೋಗಿ ಚೆನ್ನಾಗಿ ಕಲಿಯಬೇಕೆಂಬ ಮಹಾದಾಸೆ ಹೊಂದಿದ್ದ ಸೋನುವಿನ ತಾಯಿ ಲಚ್ಚೀಯ ಸಾವಿನ ನೋವಿನ ಕಥೆಯೊಂದುಕಡೆಯಾದರೆ ಮಗನ ಭವಿಷ್ಯದ ಜವಬ್ಧಾರಿಯಿಲ್ಲದೆ ಹಗಲಿರುಳು



ಕುಡಿದು ಬಂದು ಜಗಳ ಕಾಯುವ ಸೋನುವಿನ ತಂದೆ ಮಗನನ್ನು ಚಿಂದಿ ಹಾಯಲು ಕಳಿಸುವ ಮತ್ತು ಸೋನು ಹಸಿವನ್ನು ನೀಗಿಸಿಕೊಳ್ಳಲು ಪರದಾಡುವ ವಾಸ್ತವ ಲೋಕದ ಬಡತನದಲ್ಲಿ ಬೆಂದ ಮಕ್ಕಳ ನೋವಿನ ಅನಾವರಣವಾಗಿದೆ.

ಸೋನುವಿನ ತಾಯಿ ಲಚ್ಚೀ ಮಗನನ್ನು ಶಾಲೆ ಕಳಿಸುವ ವಿಚಾರ ಗಂಡನಿಗೆ ಹೇಳಿದಾಗ ಬೇಡ ಕೆಲಸಕ್ಕೆ ಕಳಿಸಿದರೆ ನಾಲ್ಕು ರೂಪಾಯಿ ಬರುತ್ತವೆ ಎನ್ನುವುದು, ಆಗ ಲಚ್ಚೀ ಕೆಲಸಕ್ಕೆ ಬೇಡ ಶಾಲೆಗೆ ಕಳಿಸೋಣ ಎಂದಾಗ ನೀನೆ ದುಡಿದು ಶಾಲೆಗೆ ಕಳಿಸು ಎಂದು ಗಂಡ ಹೇಳಿದಾಗ ಸೋನುವಿನ ತಾಯಿ ಲಚ್ಚೀ ನಾಲ್ಕಾರು ಮನೆಯ ಕಸ ಮುಸುರೆ ಕೆಲಸ ಮಾಡಿ ಮಗನಿಗೆ ಶಾಲೆಗೆ ಕಳಿಸುವಾಗ ಒಂದು ದಿನ ಲಚ್ಚೀ ಕಸ ಮುಸುರೆ ಕೆಲಸ ಮಾಡುವ ಮನೆಗೆ ಸೋನು ಮತ್ತು ಅವನ ತಂಗಿಯನ್ನು ಕರೆದೋಯ್ದು ಆಟ ಆಡಿಕೊಳ್ಳುತ್ತಿರಿ ನಾನು ಕೆಲಸ ಮುಗಿಸಿ ಬರುತ್ತೇನೆ ಎಂದು ಹೋದಾಗ ಮನೆಯ ಯಜಮಾನನ ಮಗಳು ಸೋನುವಿನೊಂದಿಗೆ ಆಟವಾಡಲು ಬಂದು ಆಟವಾಡುತ್ತಾ ಚರಂಡಿಯಲ್ಲಿ ಬಿದ್ದಾಗ ಇದಕ್ಕೆ ಕಾರಣ ಸೋನು ಎಂದು ಮನೆಯ ಯಜಮಾನ ಸೋನುವಿಗೆ ಹೊಡೆಯುವುದು. ಸೋನು ಚಿಂದಿ ಹಾಯುವಾಗ ಹಣ್ಣು ಕದಿಯದಿದ್ದರೂ ಹಣ್ಣು ಕದ್ದಿರವನೆಂದು ಸೋನುವಿನ ಬೆನ್ನಟ್ಟಿ ಹೊಡಿ ಹೋಗುವುದು ಹೀಗೆ ಮನುಷ್ಯತ್ವ ಮರೆತು ಬದುಕುತ್ತಿರುವ ಈ ಲೌಕಿಕ ಪ್ರಪಂಚದಲ್ಲಿ ಬಡವರ ಮೇಲಾಗುವ ದೌರ್ಜನ್ಯ ಮತ್ತು ಪ್ರಾಮಾಣಿಕತೆಯೇ ಜೀವಾಳವೆಂದು ನಂಬಿದವರಿಗೆ ಸಮಾಜ ಮಾಡುವ ಅಪವಾದಗಳ ಮಧ್ಯೆಯೂ ಸೋನು ತನ್ನ ಮಗಳನ್ನು ಚರಂಡಿಗೆ ಬೀಳಿಸಿದ ಎಂದು ಮನೆಯ ಯಜಮಾನ ಸೋನುವಿಗೆ ಹೊಡೆಯುತ್ತಿರುವಾಗ ಯಜಮಾನನ ಮಗಳು ಸೋನು ಅಣ್ಣನಿಗೆ ಹೊಡೆಯಬೇಡಿ ಚರಂಡಿಯಲ್ಲಿ ನಾನೇ ಬಿದ್ದಿದ್ದು ಎಂದು ನುಡಿಯುವ ಸತ್ಯದ ಮಾತುಗಳು, ಸೋನು ತಾಯಿಯನ್ನು ಕಳೆದುಕೊಂಡು ಹಸಿವಿನಿಂದ ಬಳಲುತ್ತಿರುವಾಗ ಚಿಂದಿ ಹಾಯಲು ಬರುವ ಮಕ್ಕಳಲ್ಲಿ ಫಾತೀಮ ಎನ್ನುವ ಮಗು ಹಸಿವಿನ ನೋವುಂಡ ಅನುಭವವಿರುವುದರಿಂದ ತನ್ನ ತಾಯಿ ಕೊಟ್ಟ ರೊಟ್ಟಿಯಲ್ಲಿ ಅರ್ಧ ತಿಂದು ಇನ್ನರ್ಧ ಸೋನುವಿಗೆ ತಂದುಕೊಡುವಂತಹ ಹೃದಯ ವೈಶಾಲ್ಯತೆ, ಹಸಿವಿನಿಂದ ಬಸವಳಿದ ಸೋನುವಿನ ಮುಖವನ್ನು ನೋಡಿ ಮನಕರಗಿ ನೀರಾಗಿ ಅಬ್ದುಲ್ಲಾ ಕಾಕಾ ಸೋನು ತಂದ ಚಿಕ್ಕ ಚಿಕ್ಕ ವಸ್ತುಗಳನ್ನು ತೆಗೆದುಕೊಂಡು ಇಪ್ಪತ್ತು ರೂಪಾಯಿ ಕೊಟ್ಟದ್ದು, ಸೋನುವಿಗೆ ತಾಯಿಯ ಪ್ರೀತಿ ತೋರಿಸಿ ಶಾಲೆಗೆ ಸೇರಿಸಿಕೊಂಡಿದ್ದ ಕಮಲ ಟೀಚರ್ ಮತ್ತು ಚಹಾದಂಗಡಿಯ ತಾತ ಹೊಟ್ಟೆ ತುಂಬಾ ತಿನ್ನಲು ಬನ್ ಕೊಟ್ಟಿದ್ದು ಹೀಗೆ ಮಾನವೀಯತೆಯ ವಿಷಯಗಳು ಇಣುಕು ಹಾಕುತ್ತವೆ.

ತನ್ನ ತಾಯಿ ಮತ್ತು ತಂಗಿ ಬಸ್ ನಿಲ್ದಾಣದಲ್ಲಿ ಪೋಲಿಯೋ ಹಾಕಿಸಿಕೊಂಡು ಬರುವಾಗ ಹಿಂದಿನಿಂದ ಬಸ್ ಹಾಯ್ದು ಮರಣಗೊಂಡ ನಂತರ ಮಾರನೇ ವರ್ಷ ಪೋಲಿಯೋ ಸಂದರ್ಭದಲ್ಲಿ ತನ್ನ ತಾಯಿ ಮತ್ತು ತಂಗಿಯ ಚಿತ್ರ ಬಳಸಿಕೊಂಡು ಪೋಸ್ಟರ್ ಹಚ್ಚಿದ್ದನ್ನು ಕಂಡು ಅದನ್ನು ಕಿತ್ತುಕೊಂಡು ಹೋಗುವಾಗ ಕಳ್ಳ ಕಳ್ಳ ಎಂದು ಸೋನುವನ್ನು ಹಿಡಿಯಲು ಬರುವುದನ್ನು ಕಂಡ ಸೋನು ಓಡುತ್ತಾ ಓಡುತ್ತಾ ಶಾಲೆಯ ಕಂಪೌಂಡ್ ಹಾರಿದಾಗ ಕಮಲ ಟೀಚರ್ ಅಪ್ಪುಗೆಯಲ್ಲಿ ಸೇರಿದ್ದು ಹೀಗೆ ಎಲ್ಲವನ್ನು ನಾನೇ ಹೇಳುವುದಕ್ಕಿಂತ ನೀವು ಓದಿ ಅನುಭವಿಸುವುದೇ ಚಂದ.

–ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು
ಮದರಕಲ್ಲ ಕಂದ, ರಾಯಚೂರು
9686976863

# ಭಾರತೀಯ ರೈಲ್ವೆಯು ಕಲಬುರಗಿ ಮೂಲಕ ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈ–ವಾರದ ವಿಶೇಷ ರೈಲುಗಳನ್ನು ಶಾಶ್ವತ ರೈಲು ಸೇವೆಯಾಗಿ ಕ್ರಮಬದ್ಧ



**ಬೀದರ, ಮೇ.13:** ಭಾರತೀಯ ರೈಲ್ವೆಯು ಪ್ರಯಾಣಿಕರ ಬೇಡಿಕೆಯ ಮೇರೆಗೆ ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈ–ವಾರದ ವಿಶೇಷ ರೈಲು ಸೇವೆಗಳನ್ನು ಶಾಶ್ವತ ರೈಲುಗಳಾಗಿ ಕ್ರಮಬದ್ಧಗೊಳಿಸಲಿದೆ. ಈ ಸೇವೆಯಿಂದ ವರ್ಷವಿಡೀ ಪ್ರಯಾಣಿಕರಿಗೆ ಸಂಪರ್ಕ ಮತ್ತು ಸುಧಾರಿತ ಪ್ರಯಾಣ ಯೋಜನೆಯನ್ನು ಖಚಿತಪಡಿಸುತ್ತದೆ ಎಂದು ಮಧ್ಯ ರೈಲ್ವೆ ಸೋಲಾಪುರ ವಿಭಾಗದ ಸಾರ್ವಜನಿಕ ಸಂಪರ್ಕ ಇಲಾಖೆಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.
ಈ ರೈಲು ಸೇವೆಗಳ ಕ್ರಮಬದ್ಧಗೊಳಿಸುವಿಕೆಯು ಕರ್ನಾಟಕ ಮತ್ತು ಆಂಧ್ರಪ್ರದೇಶದಾದ್ಯಂತ ಪ್ರಮುಖ ನಗರ ಮತ್ತು ಪ್ರಮುಖ ವಾಣಿಜ್ಯ, ಶೈಕ್ಷಣಿಕ, ತೀರ್ಥಯಾತ್ರೆ ಮತ್ತು ಆರೋಗ್ಯ ಕೇಂದ್ರಗಳ ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಪ್ರಯೋಜನವನ್ನು ನೀಡುತ್ತದೆ. ಈ ರೈಲುಗಳು ವಿಶೇಷವಾಗಿ ಸೋಲಾಪುರ ವಿಭಾಗದ ಕಲಬುರಗಿ, ಶಹಾಬಾದ್ ಮತ್ತು ವಾಡಿ ನಿಲ್ದಾಣಗಳಿಂದ ಬೆಂಗಳೂರು ಮತ್ತು ಇತರ ಮಧ್ಯಂತರ ನಿಲ್ದಾಣಗಳಿಗೆ ಪ್ರಯಾಣಿಕರಿಗೆ ವಿಶ್ವಾಸಾರ್ಹ ಮತ್ತು ಆರಾಮದಾಯಕ ರೈಲು ಸಂಪರ್ಕವನ್ನು ಹೆಚ್ಚಿಸುತ್ತವೆ. ಈ ಸೇವೆಯು ಕಲ್ಯಾಣ ಕರ್ನಾಟಕ ಎಂದೂ ಕರೆಯಲ್ಪಡುವ ಉತ್ತರ ಕರ್ನಾಟಕ ಮತ್ತು ಬೆಂಗಳೂರಿನ ನಡುವೆ ಪ್ರಯಾಣಿಸುವ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು, ವ್ಯಾಪಾರ ಪ್ರಯಾಣಿಕರು, ಯಾತ್ರಿಕರು ಮತ್ತು ಕುಟುಂಬಗಳನ್ನು ಪೂರೈಸುವ ನಿರೀಕ್ಷೆಯಿದೆ. ಜೊತೆಗೆ ಗುಂಟಕಲ್, ರಾಯಚೂರು ಮತ್ತು ಧರ್ಮಾವರಂನಂತಹ ಪ್ರಮುಖ ಜಂಕ್ಷನ್‌ಗಳಿಗೆ ಪ್ರವೇಶವನ್ನು ಸುಧಾರಿಸುತ್ತದೆ.
ಅಸ್ತಿತ್ವದಲ್ಲಿರುವ ವಿಶೇಷ ರೈಲು ಸಂಖ್ಯೆ 06539 ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈವಾರದ ವಿಶೇಷ ರೈಲು ಸಂಖ್ಯೆ 16559 ಆಗಿ ಪರಿವರ್ತಿಸಿ ದಿನಾಂಕ 15.05.2026 ರಿಂದ ಜಾರಿಗೆ ಬರುವಂತೆ ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈವಾರದ ವಿಶೇಷ ರೈಲು ಎಂದು ಶಾಶ್ವತ ಸೇವೆಗೆ ಕ್ರಮಬದ್ಧಗೊಳಿಸಲಾಗುತ್ತದೆ. ಅದೇರೀತಿ ಅಸ್ತಿತ್ವದಲ್ಲಿರುವ ವಿಶೇಷ ರೈಲು ಸಂಖ್ಯೆ 06540 ಬೀದರ್–ರೈಲು ಸಂಖ್ಯೆ 16560 ರೈಲಾಗಿ ಪರಿವರ್ತಿಸಿ ಬೀದರ್– ಎಸ್‌ಎಂವಿಟಿ ಬೆಂಗಳೂರು ದ್ವೈವಾರದ ವಿಶೇಷ ರೈಲಿನ ಸೇವೆ ಶಾಶ್ವತವಾಗಿ ಕ್ರಮಬದ್ಧಗೊಳಿಸಲಾಗುತ್ತದೆ.

ರೈಲು ಸಂಖ್ಯೆ 16559 ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈವಾರದ ಪ್ರತಿ ಶುಕ್ರವಾರ ಮತ್ತು ಭಾನುವಾರ ರಾತ್ರಿ 21:15 ಕ್ಕೆ ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನಿಂದ ಹೊರಟು ಮರುದಿನ ಮಧ್ಯಾಹ್ನ 12:15 ಕ್ಕೆ ಬೀದರಿಗೆ ತಲುಪಲಿದೆ.
ರೈಲು ಸಂಖ್ಯೆ 16560 ಬೀದರ್– ಎಸ್‌ಎಂವಿಟಿ ಬೆಂಗಳೂರು ದ್ವೈವಾರಕ್ಕೊಮ್ಮೆ ಪ್ರತಿ ಶನಿವಾರ ಮತ್ತು ಸೋಮವಾರ ಮಧ್ಯಾಹ್ನ 2:00 ಗಂಟೆಗೆ ಬೀದರಿನಿಂದ ಹೊರಟು ಮರುದಿನ ಬೆಳಿಗ್ಗೆ 04:00 ಗಂಟೆಗೆ ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ತಲುಪಲಿದೆ.
ಈ ರೈಲುಗಳು ಹುಮನಾಬಾದ, ಕಲಬುರಗಿ, ಶಹಾಬಾದ್, ವಾಡಿ, ಯಾದಗಿರಿ, ಕೃಷ್ಣ, ರಾಯಚೂರು, ಮಂತ್ರಾಲಯ ರಸ್ತೆ, ಅದೋನಿ, ಗುಂತಕಲ್, ಅನಂತಪುರ, ಧರ್ಮಾವರಂ, ಹಿಂದೂಪುರ ಮತ್ತು ಯಲಹಂಕಗಳಲ್ಲಿ ನಿಲುಗಡೆ ಹೊಂದಲಿವೆ. ಈ ರೈಲಿನಲ್ಲಿ 1 ಎಅ–ಖಖ ಶ್ರೇಣಿ, 2 ಎಅ–ಖಖಖ ಶ್ರೇಣಿ, 11 ಸ್ಲೀಪರ್ ವರ್ಗ, 4 ಸಾಮಾನ್ಯ ಎರಡನೇ ದರ್ಜೆ ಮತ್ತು 2 ಲಗೇಜ್ ಕಮ್ ಬ್ರೇಕ್ ವ್ಯಾನ್‌ಗಳು. (20 ಕೋಚ್‌ಗಳು) ಇರುತ್ತವೆ.
ನಿಯಮಿತಗೊಳಿಸಿದ ದ್ವೈವಾರಕ್ಕೊಮ್ಮೆ ನಡೆಯುವ ಈ ರೈಲುಗಳಿಗೆ ಕಾಯ್ದಿರಿಸುವಿಕೆ ಎಲ್ಲಾ ಗಣಕೀಕೃತ ಮೀಸಲಾತಿ ಕೇಂದ್ರಗಳಲ್ಲಿ ಮತ್ತು ವೆಬ್‌ಸೈಟ್ www.irctc.co.in ನಲ್ಲಿ ಲಭ್ಯವಿರುತ್ತವೆ.

ಕಾಯ್ದಿರಿಸದ ಬೋಗಿಗಳ ಬುಕಿಂಗ್ ಅನ್ನು ನಿಲ್ದಾಣಗಳಲ್ಲಿನ ಬುಕಿಂಗ್ ಕೌಂಟರುಗಳ ಮೂಲಕ ಮತ್ತು ರೈಲ್‌ಒನ್ ಅಪ್ಲಿಕೇಶನ್ ಮೂಲಕವೂ ಮಾಡಬಹುದು. ಅನಾನುಕೂಲತೆಯನ್ನು ತಪ್ಪಿಸಲು ಪ್ರಯಾಣಿಕರು ಮಾನ್ಯ ಟಿಕೆಟ್‌ಗಳೊಂದಿಗೆ ಪ್ರಯಾಣಿಸಲು ವಿನಂತಿಸಲಾಗಿದೆ.
ಹೊಸದಾಗಿ ಕ್ರಮಬದ್ಧಗೊಳಿಸಲಾದ ಶಾಶ್ವತ ಎರಡು ವಾರಗಳ ರೈಲುಗಳ ಅನುಕೂಲಕರ ಮತ್ತು ವಿಶ್ವಾಸಾರ್ಹ ಗೆ ಮನವಿ ಮಾಡುತ್ತದೆ. ಈ ರೈಲುಗಳ ಸೇವೆಗಳನ್ನು ಬಳಸಿಕೊಳ್ಳುವಂತೆ ಸೋಲಾಪುರ ವಿಭಾಗವು ಪ್ರದೇಶದ ಪ್ರಯಾಣಿಕರಿಗೆ
ಮನವಿ ಮಾಡಿದೆ.ರೈಲುಗಳ ನಿಲುಗಡೆ ವಿವರ ಮತ್ತು ಸಮಯಕ್ಕಾಗಿ ದಯವಿಟ್ಟು www.enquiry.indianrail.gov.in ಗೆ ಭೇಟಿ ನೀಡಿ ಅಥವಾ ರೈಲ್‌ಒನ್ ಅಪ್ಲಿಕೇಶನ್ ಅಥವಾ ಓಖಿಇಖ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಳ್ಳಲು ಕೋರಿದೆ.

# ಎಕ್ವಿಟಾಸ್ ಸ್ಮಾಲ್ ಫೈನಾನ್ ಲೈಸೆನ್ಸ್ ರದ್ದುಪಡಿಸಲು ಆಗ್ರಹ



**ಜೇವರಗಿ,ಮೇ 13:** ಆರ್ ಬಿ ಐ ನಿರ್ದೇಶನಗಳನ್ನು ಹಾಗೂ ರಾಜ್ಯ ಸರ್ಕಾರದ ಆದೇಶಗಳನ್ನು ,ಸರಿಯಾದ ಕಾನೂನು ಪಾಲಿಸುತ್ತಿಲ್ಲ ಎಂದು ಆರೋಪಿಸಿ ಸಿಪಿಐವತಿಯಿಂದ ಎಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕಿನ ಎದುರು ಪ್ರತಿಭಟನೆ ನಡೆಸಿ ಬ್ಯಾಂಕಿನ ಲೈಸೆನ್ಸ್ ರದ್ದುಪಡಿಸಲು ಆಗ್ರಹಿಸಲಾಯಿತು.
ಸಿಪಿಐ ಜಿಲ್ಲಾ ಕಾರ್ಯದರ್ಶಿ ಡಾ ಮಹೇಶ್ ಕುಮಾರ್ ಮಾತನಾಡಿ, ಬ್ಯಾಂಕ್ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಜನಸಾಮಾನ್ಯರಿಗೆ ದುಂಬಾಲು ಬಿದ್ದು ಸಾಲ ಕೊಡುತ್ತಿದೆ. ಅದಕ್ಕೆ ಬೇಕಾಬಿಟ್ಟಿಯಾಗಿ ದುಬಾರಿ ಬಡ್ಡಿಯನ್ನು ವಿಧಿಸುತ್ತಿದೆ. ಅದಕ್ಕೆ ಇ ಎಮ್ ಐ ಕಟ್ಟಲು ಸ್ವಲ್ಪ ವಿಳಂಬವಾದರೂ ಆರ್‌ಬಿಐನ ಹಾಗೂ ರಾಜ್ಯ ಸರ್ಕಾರದ ನಿರ್ದೇಶನಗಳಿಗೆ ವಿರುದ್ಧವಾಗಿ ಬೇಕಾದಷ್ಟು ದಂಡವನ್ನು ಸುಲಿಗೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು, ಇ ಐ ಎಮ್ ಕಟ್ಟಲು ವಿಫಲವಾದರೆ ಯಾವುದೇ ನೋಟಿಸ್ ಕೊಡದೆ, ಕಾಲಾವಕಾಶ ಕೊಡದೇ ಏಕಾಏಕಿ ಮನೆಯನ್ನು ಸೀಸ್ ಮಾಡಲಾಗುತ್ತಿದೆ ಎಂದರು.
ಮಲ್ಲಾಬಾದ ಏತ ನೀರಾವರಿ ರೈತ ಹೋರಾಟ ಸಮಿತಿ ಸಂಚಾಲಕ ಬಾಬು ಬಿ ಪಾಟೀಲ್,ಆದರ್ಶ ಗ್ರಾಮ ಸಮಿತಿಯ ಅಧ್ಯಕ್ಷ ಇಬ್ರಾಹಿಂ ಪಟೇಲ್ ಯಾಳವಾರ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಸೌಹಾರ್ದ ಸಮಿತಿಯ ತಾಲೂಕ ಅಧ್ಯಕ್ಷ ಹಬೀಬ್ ಜಮಾದಾರ್ ಜೈನಾಪುರ,ಕಾಂಗ್ರೆಸ್ ಮುಖಂಡಇಬ್ರಾಹಿಂ ಪಟೇಲ್ ಜೇವರ್ಗಿ ಹೋರಾಟ ಬೆಂಬಲಿಸಿ ಮಾತನಾಡಿದರು. ಮಹಮ್ಮದ್, ಸಾಜಿದ್ ಅಹಮದ್, ಚೌದರಿ, ರಾಘವೇಂದ್ರ ಹಂಗರಗಿ, ಮಲ್ಲಿಕಾರ್ಜುನ ಕಲ್ಲಹಂಗರಗಾ, ಸೈಯದ್ ಜಾಫರ್ ಹುಸೈನ್ ಆಂದೋಲ, ಕಾಂಗ್ರೆಸ್ ಮುಖಂಡರಾದ ಶಹಬುದ್ದೀನ್ ಕುಕನೂರ್, ಮಲ್ಲಣ್ಣ ಮುತ್ತಕೋಡ, ಶರಣಗೌಡ ಪೊಲೀಸ್ ಪಾಟೀಲ್, ಮುಂತಾದವರು ಉಪಸ್ಥಿತರಿದ್ದರು.

# ಪ್ರತಿಭೆಗೆ ತಕ್ಕ ಕ್ಷೇತ್ರ ಆಯ್ಕೆಯಿಂದ ಉತ್ತಮ ಸಾಧನೆ ಸಾಧ್ಯ : ಎಡವೆ

**ಔರಾದ್ :ಮೇ.12:** ಪ್ರತಿಭಾವಂತರಿಗೆ ಹಲವು ಕ್ಷೇತ್ರಗಳಲ್ಲಿ ಅವಕಾಶಗಳಿವೆ, ತಮ್ಮ ಪ್ರತಿಭೆಗೆ ತಕ್ಕ ಕ್ಷೇತ್ರ ಆಯ್ಕೆ ಮಾಡಿಕೊಂಡರೆ ಉತ್ತಮ ಸಾಧನೆ ಸಾಧ್ಯ ಎಂದು ಉದ್ಯಮಿ ಅವರ ಎಡವೆ ಹೇಳಿದರು.

ಪಟ್ಟಣದ ಘೂಳೆ ಬಡಾವಣೆಯ ಅನುಭವ ಮಂಟಪದಲ್ಲಿ ವಚನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಡಾ.ಚನ್ನಬಸವ ಪಟ್ಟದೇವರ ವಿದ್ಯಾರ್ಥಿ ನಿಧಿ 2026ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ವಚನ ಚಾರಿಟೇಬಲ್ ಟ್ರಸ್ಟ್ ಔರಾದ ಶಾಖೆ ಅದ್ಭುತ ಕಾರ್ಯ ಮಾಡುತ್ತಿದ್ದೆ ವರ್ಷ ಪೂರ್ತಿ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ, ವೈಜ್ಞಾನಿಕ, ವೈಚಾರಿಕ ಕಾರ್ಯಕ್ಕೆ ಕೈ ಜೊಡಿಸುತ್ತಿರುವದು ಶ್ಲಾಘನೀಯ ಕಾರ್ಯ ಎಂದರು.
ತಾಲೂಕು ಪಂಚಾಯತ ಸಹಾಯಕ ನಿರ್ದೇಶಕ ಶಿವಕುಮಾರ ಘಾಟೆ ಅವರು ಮಾತನಾಡಿ ತಾಲ್ಲೂಕಿನ ಪ್ರತಿಭಾವಂತ ಮಕ್ಕಳಿಗೆ ಗುರುತಿಸಿ ವಚನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪ್ರೋತ್ಸಾಹಿಸಿ ನಗದು ಬಹುಮಾನ ನೀಡುತ್ತಿರುವುದು ಶ್ಲಾಘನೀಯ ಎಂದರು.
ವಚನ ಚಾರಿಟೇಬಲ್ ಟ್ರಸ್ಟ್ ಜಿಲ್ಲಾ ಅಧ್ಯಕ್ಷ ಶಿವಶಂಕರ ಟೊಕರೆ ಮಾತನಾಡಿ ವಚನ ಸಂಸ್ಥೆ ಹೊಸ ಪರಿಕಲ್ಪನೆ ಇಟ್ಟುಕೊಂಡು ಜಿಲ್ಲೆಯಲ್ಲಿ ಸುಮಾರು 5 ಸಾವಿರ ಕುಟುಂಬಗಳಿಗೆ ಆರ್ಥಿಕ ಸದೃಢ ನೀಡುತ್ತ ಅನೇಕ ಸಮಾಜಿಕ, ದಾಸೋಹ, ಮಕ್ಕಳ ಶೈಕ್ಷಣಿಕ, ಸಮಾಜದಲ್ಲಿ ನೈತಿಕ ಹೊಣೆಗಾರಿಕೆಯ ಕಾರ್ಯ ಹೇಗೆ ನಿರ್ವಹಿಸಬೇಕು ಎಂಬುದನ್ನು ವಚನ ಸಂಸ್ಥೆ ಮಾಡುತ್ತಿದೆ, ಆಶ್ರಯ ಇಲ್ಲದ ಪ್ರತಿಭಾವಂತ ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ನಮ್ಮ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಧನ ಸಹಾಯ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸುತ್ತಿದ್ದೆವೆ ಎಂದು ಹೇಳಿದರು.ವಚನ ಸಮೂಹ ಸಂಸ್ಥೆಯ ಮುಖ್ಯಸ್ಥ ಅಲ್ಲಮಪ್ರಭು ನಾವದಗೀರೆ, ತಾಲೂಕು ಅಧ್ಯಕ್ಷ ಡಿಡಿ ಬೊಳೆಗಾವೆ ಮಾತನಾಡಿದರು. ಈ ಸಂದರ್ಭದಲ್ಲಿ ಅಮರೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ ಪ್ರೇಮಾ ಹೂಗಾರ, ವಚನ



ಸಂಸ್ಥೆಯ ಪ್ರಮುಖರಾದ ಪ್ರಕಾಶ ಗಂದಿಗುಡೆ, ಮಲ್ಲಿಕಾರ್ಜುನ ಟಂಕಸಾಲೆ, ಜಗನಾಥ ಮೂಲಗೆ, ಸೂರ್ಯಕಾಂತ ವಲ್ಲೆಪೂರೆ, ಶಿವರಾಜ ಶೆಟಕಾರ, ಮಲ್ಲಿಕಾರ್ಜುನ ಹಿಪ್ಪಳಗಾವೆ, ಗಜಾನನ ಮಳ್ಳಾ, ಧನರಾಜ ಪೀಟ್ರೆ, ಸತೀಷ ಮಜಗೆ, ಮಹಾನಂದ ಎಂಡೆ, ಗುರುರಾಜ ಯಾದವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿದ್ಯಾರ್ಥಿ ನಿಧಿ ಆಯ್ಕೆಗೊಂಡವರು
ಸಿದ್ದಮ್ಮಾ ಬಸಪ್ಪಾ, ಸಿದ್ಧರಾಮೇಶ್ವರ ಕಾಲೇಜು ಔರಾದ
ವಚನಶ್ರೀ ವಿಜಯಕುಮಾರ ಆದರ್ಶ ಶಾಲೆ ಔರಾದ
ಸಂಜನಾ ಸಂತೋಷ ಬಿರಾದಾರ ಪತ್ರಿಸ್ವಾಮಿ ಕಾಲೇಜು ಔರಾದ
ಗುರುಬಸವ ಚಂದ್ರಕಾಂತ ನವಚೇತನ ಗುರುಕುಲ ಔರಾದ
ಶೇಖರ ಹಣಮಂತ ಸರ್.ಎಂ.ವಿಶ್ವೇಶ್ವರಯ್ಯ ಶಾಲೆ ಔರಾದ
ಅಂಬಿಕಾ ರಾಜಕುಮಾರ ಸ.ಪ್ರೌ.ಶಾಲೆ ಧೂಪತಮಾಹಾಗಾಂವ
ಅಸ್ಮಿತಾ ಶಾಮಸುಂದರ ಆದರ್ಶ ಶಾಲೆ ಔರಾದ
ಅಪೂರ್ವ ಮಾರುತಿ ಸ.ಪ್ರೌ.ಶಾ ಯನಗುಂದಾ
ಭಾಗ್ಯವತಿ ಅಶೋಕ ಸ.ಪ್ರೌ. ಶಾಲೆ ಏಕಲಾರ
ಅನುಷ್ಕಾ ರಾಮಣ್ಣ ಸುಭಾಷ್ ಚಂದ್ರಭೋಸ ಶಾಲೆ

ಡಾ. ಚನ್ನಬಸವಪಟ್ಟದೇವರ ವಿದ್ಯಾರ್ಥಿ ನಿಧಿ ಸ್ಥಾಪನೆ

ತಾಲ್ಲೂಕಿನ ಸಮಾನ ಮನಸ್ಕರು ಸೇರಿ ಸಾಮಾಜಿಕ, ಶೈಕ್ಷಣಿಕ, ಹಾಗೇ ವೈಜ್ಞಾನಿಕ, ವೈಚಾರಿಕ ವಿಚಾರಧಾರೆ ಬಿತ್ತುವ ಉದ್ದೇಶದಿಂದ ಪ್ರತಿಯೊಬ್ಬರು ತಿಂಗಳಿಗೆ ಐದು ನೂರು ಜಮಾ ಮಾಡಿ, ಈ ಹಣದಿಂದಲೇ ಇಂತಹ ಸಮಾಜಮುಖಿ ಕಾರ್ಯ ಮಾಡುತ್ತಿದ್ದೇವೆ. ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಪ್ರೇರಣೆ ಆಗಲಿ ಎನ್ನುವ ಉದ್ದೇಶದಿಂದ ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ ಬರೆದಿರುವ ಭಾಲ್ಕಿಯ ಪೂಜ್ಯ ಡಾ. ಚನ್ನಬಸವ ಪಟ್ಟದ್ದೆವರ ವಿದ್ಯಾರ್ಥಿ ನಿಧಿ ಎಂದು ಹೆಸರಿಡಲಾಗಿದೆ. ಇನ್ನೂ ಮುಂದೆ ಪ್ರತಿವರ್ಷ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು.

ಡಿ.ಡಿ.ಬೋಳೆಗಾವೆ
ತಾಲೂಕ ಅಧ್ಯಕ್ಷರು ಔರಾದ

# ಸನ್ ರೈಸ್ ಕಾಲೇಜಿನಲ್ಲಿ ಅಂತರಾಷ್ಟ್ರೀಯ ನರ್ಸ್ಸ್ ಡೇ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ದೀಪ ಬೆಳಗಿಸುವ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ

## ಮಾನವೀಯ ಮೌಲ್ಯಗಳೊಂದಿಗೆ ನರ್ಸಿಂಗ್ ವೃತ್ತಿಗೆ ಪ್ರವೇಶಿಸಿದ ಸನ್ ರೈಸ್ ಪ್ರಥಮ ವರ್ಷದ ವಿದ್ಯಾರ್ಥಿಗಳು : ದೀಪದ ಬೆಳಕಿನಲ್ಲಿ ಸೇವಾ ಪ್ರತಿಜ್ಞೆ





ಧೈರ್ಯದ ದಾರಿ

**ಸಿಂಧನೂರು : ಮೇ 13–** ಸನ್ ರೈಸ್ ಡಿ ಫಾರ್ಮಸಿ,ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಅಂತರಾಷ್ಟ್ರೀಯ ನರ್ಸ್ ಡೇ ಅಂಗವಾಗಿ ಪ್ರಥಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳ ಲ್ಯಾಂಪ್ ಲೈಟಿಂಗ್ ಹಾಗೂ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮವು ಅತ್ಯಂತ ಗೌರವಪೂರ್ಣ ಹಾಗೂ ಭಾವನಾತ್ಮಕ ವಾತಾವರಣದಲ್ಲಿ ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಕರಾದ ಡಾ. ಚನ್ನನಗೌಡ ಪಾಟೀಲ್ ಹಾಗೂ ಗಣ್ಯ ಅತಿಥಿಗಳು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವ, ಸೇವಾ ಮನೋಭಾವ ಮತ್ತು ಮಾನವೀಯ ಮೌಲ್ಯಗಳ ಬಗ್ಗೆ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.ನರ್ಸಿಂಗ್ ವೃತ್ತಿ ಎಂದರೆ ಕೇವಲ ಉದ್ಯೋಗವಲ್ಲ  ಅದು ಸೇವೆ, ಕರುಣೆ ಮತ್ತು ಮಾನವೀಯತೆಯ ಜೀವಂತ ರೂಪವಾಗಿದೆ.

ಜಗತ್ತಿನಾದ್ಯಂತ ಆರೋಗ್ಯ ಸೇವೆಯ ಹೃದಯವೆಂದೇ ಪರಿಗಣಿಸಲ್ಪಡುವ ನರ್ಸ್‌ಗಳು, ರೋಗಿಯ ನೋವನ್ನು ಕಡಿಮೆ ಮಾಡುವ ದೇವದೂತರಂತೆ ಕಾರ್ಯನಿರ್ವಹಿಸುತ್ತಾರೆ. ವೈದ್ಯಕೀಯ ಕ್ಷೇತ್ರದಲ್ಲಿ ವೈದ್ಯರು ಚಿಕಿತ್ಸೆ ನೀಡಿದರೆ, ನರ್ಸ್‌ಗಳು ಪ್ರೀತಿ, ಸಹನೆ ಮತ್ತು ಆರೈಕೆಯ ಮೂಲಕ ರೋಗಿಗೆ ಜೀವದ ಧೈರ್ಯ ನೀಡುತ್ತಾರೆ. ಎಂದರು

ಇಂದು ನಡೆಯುತ್ತಿರುವ ಲ್ಯಾಂಪ್ ಲೈಟಿಂಗ್ ಸಮಾರಂಭವು ನಿಮ್ಮ ಜೀವನದ ಅತ್ಯಂತ ಪವಿತ್ರ ಕ್ಷಣವಾಗಿದೆ. ದೀಪದ ಬೆಳಕು ಕೇವಲ ಜ್ಯೋತಿ ಅಲ್ಲ  ಅದು ಜ್ಞಾನ, ಸೇವಾ ಮನೋಭಾವ ಮತ್ತು ಜವಾಬ್ದಾರಿಯ ಸಂಕೇತವಾಗಿದೆ. ನೀವು ಹಚ್ಚುವ ಈ ದೀಪವು ಮಾನವ ಸೇವೆಯ ದಾರಿಯಲ್ಲಿ ನಿಮ್ಮನ್ನು ಸದಾ ಮಾರ್ಗದರ್ಶನ ಮಾಡಲಿ. ಎಂದರು

ಲ್ಯಾಂಪ್ ಲೈಟಿಂಗ್ ಸಮಾರಂಭವು ನರ್ಸಿಂಗ್ ವಿದ್ಯಾರ್ಥಿಗಳ ಜೀವನದ ಮಹತ್ವದ ಘಟ್ಟವಾಗಿದ್ದು, ವೈದ್ಯಕೀಯ ಸೇವೆಯ ಪವಿತ್ರ ಪ್ರವೇಶದ ಸಂಕೇತವೆಂದು ಪರಿಗಣಿಸಲಾಗುತ್ತದೆ. ಪ್ರಥಮ ವರ್ಷದ ವಿದ್ಯಾರ್ಥಿಗಳು ದೀಪ ಹಚ್ಚುವ ಮೂಲಕ

ಸೇವಾ ಮನೋಭಾವದ ಆರಂಭ

ಮಾನವೀಯತೆ ಮತ್ತು ಕರುಣೆಯ ಪ್ರತಿಜ್ಞೆ

ರೋಗಿಗಳ ಆರೈಕೆಗೆ ಜೀವನ ಸಮರ್ಪಿಸುವ ಸಂಕಲ್ಪ

ಎಂಬ ಸಂದೇಶವನ್ನು ಸಾರಿದರು...

ನಂತರ ಕಾರ್ಯಕ್ರಮದ ಪ್ರಮುಖ ಅಂಗವಾಗಿ ಪ್ರಥಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳು ಪ್ರತಿಜ್ಞಾವಿಧಿಯನ್ನು ಅತ್ಯಂತ ಗೌರವಭಾವದಿಂದ ಸ್ವೀಕರಿಸಿದರು. ಲ್ಯಾಂಪ್ ಲೈಟಿಂಗ್ ಸಮಾರಂಭದ ನಂತರ ವಿದ್ಯಾರ್ಥಿಗಳು ನರ್ಸಿಂಗ್ ವೃತ್ತಿಯ ಪವಿತ್ರತೆಯನ್ನು ಮನದಟ್ಟುಗೊಳಿಸಿಕೊಂಡು ಸೇವಾ ಸಂಕಲ್ಪವನ್ನು ಘೋಷಿಸಿದರು.

ಪ್ರತಿಜ್ಞಾವಿಧಿ ಸ್ವೀಕಾರದ ಸಂದರ್ಭದಲ್ಲಿ ವಿದ್ಯಾರ್ಥಿಗಳು

ರೋಗಿಗಳ ಆರೈಕೆಯನ್ನು ತಮ್ಮ ಪ್ರಮುಖ ಕರ್ತವ್ಯವೆಂದು ಪಾಲಿಸುವುದು ಮಾನವೀಯತೆ, ಕರುಣೆ ಹಾಗೂ ಸಹಾನುಭೂತಿಯೊಂದಿಗೆ ಸೇವೆ ಸಲ್ಲಿಸುವುದುವೃತ್ತಿನೈತಿಕ ಮೌಲ್ಯಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು

ಸಮಾಜದ ಆರೋಗ್ಯ ರಕ್ಷಣೆಗೆ ಸಮರ್ಪಿತವಾಗಿ ಕಾರ್ಯನಿರ್ವಹಿಸುವುದುಎಂಬ ಸಂಕಲ್ಪಗಳನ್ನು ಸ್ವೀಕರಿಸಿದರು.

ಈ ಪ್ರತಿಜ್ಞಾವಿಧಿ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ ನರ್ಸಿಂಗ್ ವೃತ್ತಿಗೆ ಅಧಿಕೃತವಾಗಿ ಪ್ರವೇಶಿಸುವ ಮಹತ್ವದ ಕ್ಷಣವಾಗಿ ಗುರುತಿಸಲ್ಪಟ್ಟಿತು.

, ರೋಗಿಗಳ ಆರೈಕೆಯನ್ನು ಕರ್ತವ್ಯ ಮಾತ್ರವಲ್ಲ, ಸೇವಾ ಧರ್ಮವೆಂದು ಸ್ವೀಕರಿಸುವ ಬದ್ಧತೆಯನ್ನು ವ್ಯಕ್ತಪಡಿಸಿದರು......

ನಂತರ ಹಿರಿಯ ನರ್ಸಿಂಗ್ ಆಫೀಸರ್ ಗುರು ಶಾಂತಮ್ಮ ಅವರು ಕೇಕ್ ಕಟ್ ಮಾಡುವುದರ ಮೂಲಕ ತಮ್ಮ 26 ವರ್ಷದ ಸಮರ್ಪಿತ ಸೇವೆಯನ್ನು ಸ್ಮರಿಸಿದರು.

ಆರೋಗ್ಯ ಸೇವಾ ಕ್ಷೇತ್ರದಲ್ಲಿ ದೀರ್ಘಕಾಲದಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಅವರು, ನರ್ಸಿಂಗ್ ವೃತ್ತಿಯ ನಿಷ್ಠೆ, ಕರುಣೆ ಹಾಗೂ ಮಾನವೀಯ ಮೌಲ್ಯಗಳ ಪ್ರತಿರೂಪವಾಗಿದ್ದಾರೆ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ವಿದ್ಯಾರ್ಥಿಗಳು ಅವರ ಸೇವಾ ಜೀವನವನ್ನು ಅಭಿನಂದಿಸಿ ಗೌರವ ಸಲ್ಲಿಸಿದರು.

ತಮ್ಮ ಅನುಭವಗಳನ್ನು ಹಂಚಿಕೊಂಡ ಅವರು, ನರ್ಸಿಂಗ್ ವೃತ್ತಿಯಲ್ಲಿ ಸೇವಾ ಮನೋಭಾವ, ತಾಳ್ಮೆ ಮತ್ತು ರೋಗಿಗಳ ಪ್ರೀತಿಯೇ ನಿಜವಾದ ಯಶಸ್ಸಿನ ಮಾರ್ಗವೆಂದು ತಿಳಿಸಿದರು. ಅವರ 26 ವರ್ಷದ ಸೇವಾ ಪಯಣ ಹೊಸ ತಲೆಮಾರದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿ ಪರಿಣಮಿಸಿತು.

ಈ ಕ್ಷಣ ಕಾರ್ಯಕ್ರಮಕ್ಕೆ ಮತ್ತಷ್ಟು ಭಾವನಾತ್ಮಕ ಹಾಗೂ ಸ್ಮರಣೀಯ ಮೆರಗು ತಂದಿತು.... ನಂತರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಗೌರವಿಸುವ ಸಲುವಾಗಿ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ. ವಿದ್ಯಾರ್ಥಿನಿ ನಯನ ಅವರಿಗೆ ಶೈಕ್ಷಣಿಕ ಸಾಧನೆಗೆ ಸಂಸ್ಥೆಯ ಪರವಾಗಿ ಗೌರವಪೂರ್ವಕವಾಗಿ ಸನ್ಮಾನ ಸಲ್ಲಿಸಲಾಯಿತು.

ಗಣ್ಯರು ಶಾಲು, ಫಲಕ ಹಾಗೂ ಸ್ಮರಣಿಕೆಯನ್ನು ನೀಡಿ ಅಭಿನಂದನೆ ಸಲ್ಲಿಸಿ, ಅವರ ಪರಿಶ್ರಮ, ಶಿಸ್ತು ಮತ್ತು ನಿರಂತರ ಅಧ್ಯಯನ ಮನೋಭಾವವನ್ನು ಶ್ಲಾಘಿಸಿದರು. ವಿದ್ಯಾರ್ಥಿನಿ ನಯನ ಅವರ ಸಾಧನೆ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಲು ಯುವಜನತೆಗೆ ಉತ್ತೇಜನ ನೀಡುವಂತಾಯಿತು....ನಂತರ ನರ್ಸಿಂಗ್ ದಿನಾಚರಣೆಯ ಅಂಗವಾಗಿ ಆಯೋಜಿಸಲಾದ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು. ಇದರಿಂದ ವಿದ್ಯಾರ್ಥಿಗಳಲ್ಲಿ ತಂಡಭಾವನೆ, ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವ ಹಾಗೂ ಉತ್ಸಾಹ ಹೆಚ್ಚಾಯಿತು..... ನಂತರ ವಕೀಲರ ಸಂಘದ ಅಧ್ಯಕ್ಷರಾದ ಭೀಮನಗೌಡ ಸರ್ ಅವರು ಮಾತನಾಡಿ ಅಂತರಾಷ್ಟ್ರೀಯ ನರ್ಸ್ ದಿನಾಚರಣೆಯ ಮಹತ್ವವನ್ನು ವಿವರಿಸಿದರು.

ನರ್ಸಿಂಗ್ ವೃತ್ತಿ ಸಮಾಜದ ಆರೋಗ್ಯ ರಕ್ಷಣೆಯ ಪ್ರಮುಖ ಆಧಾರವಾಗಿದ್ದು, ನರ್ಸ್‌ಗಳು ರೋಗಿಗಳ ಸೇವೆಯಲ್ಲಿ ತೋರಿಸುವ ಕರುಣೆ, ಸಹಾನುಭೂತಿ ಮತ್ತು ತ್ಯಾಗಭಾವ ಅಪಾರವೆಂದು ಅವರು ಅಭಿಪ್ರಾಯಪಟ್ಟರು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮಾನಸಿಕ ಧೈರ್ಯ ಹಾಗೂ ಆತ್ಮವಿಶ್ವಾಸ ತುಂಬುವಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಮಹತ್ತರವಾಗಿದೆ ಎಂದು ಹೇಳಿದರು.

ನರ್ಸ್‌ಗಳು ಕೇವಲ ವೈದ್ಯಕೀಯ ಸಹಾಯಕರು ಅಲ್ಲ, ಮಾನವೀಯ ಮೌಲ್ಯಗಳನ್ನು ಜೀವಂತವಾಗಿಡುವ ಸೇವಕರು ಎಂದು ತಿಳಿಸಿದ ಅವರು, ಸಮಾಜವು ನರ್ಸಿಂಗ್ ವೃತ್ತಿಗೆ ಹೆಚ್ಚಿನ ಗೌರವ ನೀಡಬೇಕು ಎಂದು ಕರೆ ನೀಡಿದರು. ಹೊಸ ತಲೆಮಾರದ ನರ್ಸಿಂಗ್ ವಿದ್ಯಾರ್ಥಿಗಳು ಸೇವಾ ಮನೋಭಾವ, ಶಿಸ್ತು ಮತ್ತು ನೈತಿಕತೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಆರೋಗ್ಯ ಸೇವಕರಾಗಬೇಕು ಎಂದು ಸಲಹೆ ನೀಡಿದರು.... ನಂತರ ಮಾತನಾಡಿದ ಪತ್ರಕರ್ತರಾದ ಚಂದ್ರಶೇಖರ್ ಬೆನ್ನೂರ್ ಅವರು ಮಾತನಾಡಿ ಅಂತರಾಷ್ಟ್ರೀಯ ನರ್ಸ್ ದಿನದ ಮಹತ್ವವನ್ನು ವಿವರಿಸಿದರು.

ನರ್ಸಿಂಗ್ ವೃತ್ತಿ ಸಮಾಜದ ಆರೋಗ್ಯ ವ್ಯವಸ್ಥೆಯ ಪ್ರಮುಖ ಸ್ತಂಭವಾಗಿದ್ದು, ನರ್ಸ್‌ಗಳು ಹಗಲು–ರಾತ್ರಿ ಎಂಬ ಭೇದವಿಲ್ಲದೆ ರೋಗಿಗಳ ಸೇವೆಯಲ್ಲಿ ತೊಡಗಿರುವ ನಿಸ್ವಾರ್ಥ ಸೇವಕರು ಎಂದು ಅವರು ಹೇಳಿದರು. ರೋಗಿಯ ನೋವನ್ನು ತಮ್ಮದೇ ನೋವಿನಂತೆ ಅರ್ಥಮಾಡಿಕೊಂಡು ಸೇವೆ ಸಲ್ಲಿಸುವುದು ನರ್ಸ್ ವೃತ್ತಿಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕೊವಿಡ್ ಸೇರಿದಂತೆ ಸಂಕಷ್ಟದ ಸಂದರ್ಭಗಳಲ್ಲಿ ನರ್ಸ್‌ಗಳು ತೋರಿದ ಧೈರ್ಯ, ತ್ಯಾಗ ಮತ್ತು ಸೇವಾ ಮನೋಭಾವವನ್ನು ಸಮಾಜ ಎಂದಿಗೂ ಮರೆಯಲಾರದು ಎಂದು ಅವರು ತಿಳಿಸಿದರು.

ಯುವ ನರ್ಸಿಂಗ್ ವಿದ್ಯಾರ್ಥಿಗಳು ಮಾನವೀಯತೆ, ಶಿಸ್ತು ಮತ್ತು ಕರ್ತವ್ಯನಿಷ್ಠೆಯನ್ನು ತಮ್ಮ ಜೀವನದ ಮೌಲ್ಯಗಳಾಗಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.... ನಂತರ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ ನಿವೃತ್ತ ಶಿಕ್ಷಕರಾದ ಮಹಾಂತೇಶ್ ಅವರು ಮಾತನಾಡಿ. ನರ್ಸಿಂಗ್ ವೃತ್ತಿ ಸಮಾಜ ಸೇವೆಯ ಅತ್ಯುನ್ನತ ರೂಪವಾಗಿದ್ದು, ನರ್ಸ್‌ಗಳು ರೋಗಿಗಳ ನೋವನ್ನು ಕಡಿಮೆ ಮಾಡುವಲ್ಲಿ ತಾಯಿ ಮಮತೆಯಂತೆ ಆರೈಕೆ ನೀಡುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು. ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳ ಸೇವೆ ಮಾನವೀಯತೆ, ಸಹಾನುಭೂತಿ ಹಾಗೂ ತ್ಯಾಗದ ಪ್ರತೀಕವಾಗಿದೆ ಎಂದು ಹೇಳಿದರು.

ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಒಬ್ಬ ನರ್ಸ್ ಸಂಪೂರ್ಣ ಆರೋಗ್ಯ ಸೇವಕರಾಗಲು ಸಾಧ್ಯ ಎಂದು ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನರ್ಸಿಂಗ್ ವೃತ್ತಿ ಸಮಾಜದ ನಂಬಿಕೆ ಮತ್ತು ಗೌರವವನ್ನು ಪಡೆದಿರುವ ಪವಿತ್ರ ಸೇವೆಯಾಗಿದ್ದು, ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಕರೆ ನೀಡಿದರು.."ನಮ್ಮ ಶಿಷ್ಯರು ಸಿಂಧನೂರು ಪಟ್ಟಣದಲ್ಲಿ ಸನ್ ರೈಸ್ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ" ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಸಂಸ್ಥೆ ಬೆಳೆಯುತ್ತಿರುವುದು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆಯಾಗಿದೆ ಎಂದು ಅವರು ಹೇಳಿದರು.

ಶಿಕ್ಷಣ ಸಂಸ್ಥೆಗಳು ಸಮಾಜ ಪರಿವರ್ತನೆಯ ಕೇಂದ್ರಗಳಾಗಿದ್ದು, ಇಂತಹ ಸಂಸ್ಥೆಗಳ ಬೆಳವಣಿಗೆ ಯುವಜನತೆಗೆ ಹೊಸ ಭವಿಷ್ಯ ನಿರ್ಮಾಣದ ದಾರಿಯನ್ನು ತೆರೆದಿದೆ ಎಂದು ಶ್ಲಾಘಿಸಿದರು....ನಂತರ ಜಮಾತೆ ಇಸ್ಲಾಮಿ ಹಿಂದ ಸಂಘಟನೆಯ ಅಧ್ಯಕ್ಷ ಶ್ರೀ ಹುಸೇನ್ ಸಾಬ್ ಅವರು ಮಾತನಾಡಿ

ನರ್ಸಿಂಗ್ ವೃತ್ತಿ ಮಾನವ ಸೇವೆಯ ಅತ್ಯಂತ ಪವಿತ್ರ ಕ್ಷೇತ್ರವಾಗಿದ್ದು, ರೋಗಿಗಳ ಸೇವೆ ಮಾಡುವುದೇ ದೇವರ ಸೇವೆಯಂತಾಗಿದೆ ಎಂದು ಅವರು ಹೇಳಿದರು. ಸಮಾಜದಲ್ಲಿ ಆರೋಗ್ಯ ರಕ್ಷಣೆಗಾಗಿ ನರ್ಸ್‌ಗಳು ಸಲ್ಲಿಸುತ್ತಿರುವ ಸೇವೆ ಅಪಾರವಾಗಿದ್ದು, ಅವರ ತ್ಯಾಗ, ಸಹನೆ ಮತ್ತು ಕರುಣೆಯ ಮನೋಭಾವ ಎಲ್ಲರಿಗೂ ಮಾದರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಜಾತಿ, ಧರ್ಮ, ಭಾಷೆ ಎಂಬ ಭೇದವಿಲ್ಲದೆ ಪ್ರತಿಯೊಬ್ಬ ರೋಗಿಗೆ ಸಮಾನ ಸೇವೆ ನೀಡುವ ನರ್ಸ್‌ಗಳು ಮಾನವೀಯತೆಯ ನಿಜವಾದ ಪ್ರತಿನಿಧಿಗಳಾಗಿದ್ದಾರೆ ಎಂದು ಹೇಳಿದರು. ಯುವ ನರ್ಸಿಂಗ್ ವಿದ್ಯಾರ್ಥಿಗಳು ಸೇವಾ ಮನೋಭಾವವನ್ನು ಜೀವನದ ಧ್ಯೆಯವಾಗಿಸಿಕೊಂಡು ಸಮಾಜದ ಆರೋಗ್ಯ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ಅಂತರಾಷ್ಟ್ರೀಯ ನರ್ಸ್ ಡೇ ಆಚರಣೆ ನರ್ಸ್‌ಗಳ ಅಮೂಲ್ಯ ಸೇವೆಯನ್ನು ಸ್ಮರಿಸುವುದರ ಜೊತೆಗೆ ಸಮಾಜದಲ್ಲಿ ಸೇವಾ ಮೌಲ್ಯಗಳನ್ನು ಬಲಪಡಿಸುವ ಮಹತ್ವದ ದಿನವಾಗಿದೆ ಎಂದು ಅವರು ತಿಳಿಸಿದರು... ನಂತರ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಅವರು ಮಾತನಾಡಿ ನರ್ಸಿಂಗ್ ವೃತ್ತಿ ಸಮಾಜದ ಆರೋಗ್ಯ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದ್ದು, ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಶ್ಲಾಘನೀಯ ಎಂದು ಹೇಳಿದರು. ಲ್ಯಾಂಪ್ ಲೈಟಿಂಗ್ ಹಾಗೂ ಪ್ರತಿಜ್ಞಾವಿಧಿ ಕಾರ್ಯಕ್ರಮವು ವಿದ್ಯಾರ್ಥಿಗಳ ವೃತ್ತಿ ಜೀವನಕ್ಕೆ ಉತ್ತಮ ದಿಕ್ಕು ನೀಡುವ ಮಹತ್ವದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಸನ್ ರೈಸ್ ಶಿಕ್ಷಣ ಸಂಸ್ಥೆ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸುತ್ತಿರುವುದು ಸಂತೋಷದ ವಿಷಯವಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು... ನಂತರ ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಲಿಂಗಸ್ಗೂರಿನ ಅಧ್ಯಕ್ಷ ಶಾಂತನಗೌಡ ಪಾಟೀಲ್ ಅವರು ಮಾತನಾಡಿ

ಸನ್ ರೈಸ್ ಶಿಕ್ಷಣ ಸಂಸ್ಥೆಯ ಬೆಳವಣಿಗೆ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು.

ಸನ್ ರೈಸ್ ಸಂಸ್ಥೆಯ ಅಧ್ಯಕ್ಷರಾದ ತಮ್ಮ ಗೆಳೆಯ ಇರ್ಫಾನ್ ಅವರು ಪರಿಶ್ರಮಿ, ಅವರ. ಕಠಿಣ ಪರಿಶ್ರಮ, ನಿಷ್ಠೆ ಹಾಗೂ ಶಿಕ್ಷಣದ ಮೇಲಿನ ಬದ್ಧತೆಯಿಂದ ಸಂಸ್ಥೆಯನ್ನು ಬೆಳೆಸುತ್ತಿರುವುದು ಶ್ಲಾಘನೀಯ ಸಾಧನೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೇವಾ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಸಂಸ್ಥೆ ಕಾರ್ಯನಿರ್ವಹಿಸುತ್ತಿರುವುದು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆಯಾಗಿದೆ ಎಂದು ಅವರು ಹೇಳಿದರು. ಯುವಜನತೆಗೆ ಉತ್ತಮ ಭವಿಷ್ಯ ನಿರ್ಮಾಣ ಮಾಡುವ ಶಿಕ್ಷಣ ಸಂಸ್ಥೆಗಳು ಸಮಾಜದ ನಿಜವಾದ ಶಕ್ತಿಯಾಗಿದ್ದು, ಸನ್ ರೈಸ್ ಸಂಸ್ಥೆ ಅದಕ್ಕೆ ಉತ್ತಮ ಉದಾಹರಣೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಅವರ ಪರಿಶ್ರಮದಿಂದ ಮುಂದಿನ ದಿನಗಳಲ್ಲಿ ಸಂಸ್ಥೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.ಗುರು–ಶಿಷ್ಯರ ಸಂಬಂಧದ ಮಹತ್ವವನ್ನು ವಿವರಿಸಿದರು.

ಗುರು ಮತ್ತು ಶಿಷ್ಯರ ಸಂಬಂಧವು ಭಾರತೀಯ ಸಂಸ್ಕೃತಿಯ ಅಮೂಲ್ಯ ಪರಂಪರೆಯಾಗಿದ್ದು, ಶಿಕ್ಷಣವೆಂದರೆ ಕೇವಲ ಪಾಠ ಕಲಿಸುವುದಲ್ಲ, ವ್ಯಕ್ತಿತ್ವ ನಿರ್ಮಾಣ ಮಾಡುವ ಪವಿತ್ರ ಪ್ರಕ್ರಿಯೆಯಾಗಿದೆ ಎಂದು ಹೇಳಿದರು. ಒಬ್ಬ ಉತ್ತಮ ಗುರು ವಿದ್ಯಾರ್ಥಿಗೆ ಜ್ಞಾನ ಮಾತ್ರವಲ್ಲ, ಜೀವನ ಮೌಲ್ಯಗಳು, ಶಿಸ್ತು ಹಾಗೂ ಸೇವಾ ಮನೋಭಾವವನ್ನು ನೀಡುತ್ತಾರೆ ಎಂದು ಅಭಿಪ್ರಾಯಪಟ್ಟರು.

ಶಿಷ್ಯರು ಗುರುಗಳ ಮಾರ್ಗದರ್ಶನವನ್ನು ಗೌರವಿಸಿ ಜೀವನದಲ್ಲಿ ಅಳವಡಿಸಿಕೊಂಡಾಗ ಸಮಾಜಕ್ಕೆ ಉತ್ತಮ ನಾಗರಿಕರು ರೂಪುಗೊಳ್ಳುತ್ತಾರೆ ಎಂದು ತಿಳಿಸಿದರು. ಗುರುಗಳ ಆಶೀರ್ವಾದ ಮತ್ತು ಶಿಷ್ಯರ ಪರಿಶ್ರಮ ಒಂದಾಗಿದಾಗ ಯಶಸ್ಸು ಖಚಿತವಾಗುತ್ತದೆ ಎಂದು ಅವರು ಹೇಳಿದರು.

ಸನ್ ರೈಸ್ ಶಿಕ್ಷಣ ಸಂಸ್ಥೆಯಲ್ಲಿ ಗುರು–ಶಿಷ್ಯ ಪರಂಪರೆ ಉತ್ತಮವಾಗಿ ಬೆಳೆಯುತ್ತಿರುವುದು ಸಂತೋಷದ ವಿಷಯವಾಗಿದ್ದು, ಇಂತಹ ಶಿಕ್ಷಣ ವಾತಾವರಣವು ಸಮಾಜದ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.... ನಂತರ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ಕೆಯವರು ಅಧ್ಯಕ್ಷೀಯ ಭಾಷಣದಲ್ಲಿ. ಲ್ಯಾಂಪ್ ಲೈಟಿಂಗ್ ಮೂಲಕ ಸ್ವೀಕರಿಸುವ ದೀಪವು ಕೇವಲ ಬೆಳಕು ಅಲ್ಲ  ಅದು ಜವಾಬ್ದಾರಿ, ಶಿಸ್ತು ಹಾಗೂ ಸೇವಾ ಸಂಕಲ್ಪದ ಪ್ರತೀಕವಾಗಿದೆ. ಈ ದೀಪ ನಿಮ್ಮ ಜೀವನದಲ್ಲಿ ಸದಾ ಮಾನವ ಸೇವೆಯ ಮಾರ್ಗವನ್ನು ಬೆಳಗಿಸಲಿ.

ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ಸೇವೆಯ ಪಾತ್ರ ಅತ್ಯಂತ ಮಹತ್ತರವಾಗಿದೆ. ಆಸ್ಪತ್ರೆಗಳ ಹೃದಯವೇ ನರ್ಸ್ ಎಂದು ಹೇಳಬಹುದು. ನಿಮ್ಮ ಸೇವೆಯಿಂದ ಅನೇಕ ಕುಟುಂಬಗಳಿಗೆ ಆಶಾ, ಧೈರ್ಯ ಮತ್ತು ಬದುಕಿನ ಹೊಸ ನಂಬಿಕೆ ದೊರೆಯುತ್ತದೆ.

ಸನ್ ರೈಸ್ ಸಂಸ್ಥೆಯು ಉತ್ತಮ ಜ್ಞಾನ, ಉತ್ತಮ ಸಂಸ್ಕಾರ ಹಾಗೂ ಸಮಾಜಮುಖಿ ಸೇವಾ ಮನೋಭಾವ ಹೊಂದಿದ ನರ್ಸಿಂಗ್ ವೃತ್ತಿಪರರನ್ನು ಸಮಾಜಕ್ಕೆ ನೀಡುವ ಗುರಿಯನ್ನು ಹೊಂದಿದೆ. ನೀವು ಕೇವಲ ಉತ್ತಮ ನರ್ಸ್‌ಗಳಾಗದೇ, ಉತ್ತಮ ಮಾನವರಾಗಬೇಕು ಎಂಬುದು ನಮ್ಮ ಆಶಯ.

ಇಂದು ಈ ಪವಿತ್ರ ದಿನದಂದು ಎಲ್ಲಾ ನರ್ಸಿಂಗ್ ವಿದ್ಯಾರ್ಥಿಗಳಿಗೆ ನನ್ನ ಹಾರ್ದಿಕ ಶುಭಾಶಯಗಳು. ನಿಮ್ಮ ಸೇವಾ ಪಯಣ ಯಶಸ್ವಿಯಾಗಲಿ, ನಿಮ್ಮ ಕೈಗಳಿಂದ ಅನೇಕ ಜೀವಗಳು ಆರೋಗ್ಯವಂತರಾಗಲಿ ಎಂದು ಹಾರೈಸುತ್ತೇನೆ....ಎಂದರು ನಂತರ ಸನ್ ರೈಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನರ್ಸಿಂಗ್ ಆಫೀಸರ್ ಗಳನ್ನು ಸನ್ಮಾನಿಸಿ ಗೌರವಿಸಲಾಯಿತು... ನಂತರ ತಮ್ಮ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯರಾದ ವೀರಭದ್ರಯ್ಯ ಸ್ವಾಮಿ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು...ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶ್ರೀ ಪೂಜ್ಯ ಸದಾನಂದ ಶರಣರು, ಸಿದ್ಧಾಶ್ರಮ ವೆಂಕಟಗಿರಿ ಕ್ಯಾಂಪ್ ಅವರು ನರ್ಸಿಂಗ್ ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿ ಮಾತನಾಡಿದರು. ನರ್ಸಿಂಗ್ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಮಾನವ ಸೇವೆಯ ಮಹತ್ತರ ಧರ್ಮವಾಗಿದ್ದು, ರೋಗಿಗಳ ನೋವನ್ನು ತಣಿಸುವ ಪವಿತ್ರ ಸೇವೆಯಾಗಿದೆ ಎಂದು ಹೇಳಿದರು.

ನರ್ಸಿಂಗ್ ವಿದ್ಯಾರ್ಥಿಗಳು ಕರುಣೆ, ಸಹಾನುಭೂತಿ, ಸಹನೆ ಮತ್ತು ಸೇವಾ ಮನೋಭಾವವನ್ನು ತಮ್ಮ ಜೀವನದ ಮೌಲ್ಯಗಳಾಗಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ವೈದ್ಯಕೀಯ ಕ್ಷೇತ್ರದಲ್ಲಿ ಜ್ಞಾನಕ್ಕಿಂತಲೂ ಮಾನವೀಯತೆ ಮುಖ್ಯವಾಗಿದ್ದು, ರೋಗಿಗಳನ್ನು ಕುಟುಂಬದ ಸದಸ್ಯರಂತೆ ನೋಡಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

ರೋಗಿಗಳ ಪ್ರಾಣ ರಕ್ಷಣೆ ಮಾಡುವ ನರ್ಸ್‌ಗಳು ದೇವರ ದೂತರಂತೆ ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ಹೇಳಿ, ಶ್ರದ್ಧೆ, ಶಿಸ್ತು ಹಾಗೂ ನೈತಿಕತೆ ಮೂಲಕ ವೃತ್ತಿಯಲ್ಲಿ ಶ್ರೇಷ್ಠತೆ ಸಾಧಿಸಬೇಕೆಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು.

ಕೊನೆಯಲ್ಲಿ ಎಲ್ಲಾ ನರ್ಸಿಂಗ್ ವಿದ್ಯಾರ್ಥಿಗಳು ಆರೋಗ್ಯ ಸೇವೆಯಲ್ಲಿ ಯಶಸ್ಸು ಸಾಧಿಸಿ ಸಮಾಜಕ್ಕೆ ಬೆಳಕಾಗಲಿ ಎಂದು ಆಶೀರ್ವದಿಸಿದರು.ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಸಮಾಜಕ್ಕೆ ಗುಣಮಟ್ಟ ಆರೋಗ್ಯ ಸೇವಕರನ್ನು ರೂಪಿಸುವ ಕಾರ್ಯ ಅತ್ಯಂತ ಪುಣ್ಯಕರ ಸೇವೆಯಾಗಿದೆ ಎಂದು ಹೇಳಿದರು.

ನರ್ಸಿಂಗ್ ಶಿಕ್ಷಣದ ಮೂಲಕ ಸಮಾಜಕ್ಕೆ ಕರುಣೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಬೆಳೆಸುವಲ್ಲಿ ಸಂಸ್ಥೆಯ ಅಧ್ಯಕ್ಷರ ಪಾತ್ರ ಮಹತ್ತರವಾಗಿದೆ ಎಂದು ಅವರು ಪ್ರಶಂಸಿಸಿದರು. ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಶಿಕ್ಷಣ ದಾತರು ಸಮಾಜದ ನಿಜವಾದ ದೀಪಸ್ತಂಭಗಳಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಶಿಕ್ಷಣದ ಜೊತೆಗೆ ಸಂಸ್ಕಾರ, ಸೇವಾ ಮನೋಭಾವ ಮತ್ತು ನೈತಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಕಾರ್ಯವನ್ನು ಸಂಸ್ಥೆ ಯಶಸ್ವಿಯಾಗಿ ನಡೆಸುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು. ಇಂತಹ ಶಿಕ್ಷಣ ಸಂಸ್ಥೆಗಳು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಮೂಲಭೂತ ಶಕ್ತಿಯಾಗಿವೆ ಎಂದು ಅವರು ತಿಳಿಸಿದರು.... ನಂತರ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಎಲ್ಲ ಗಣ್ಯರಿಗೆ ಸಂಸ್ಥೆ ವತಿಯಿಂದ ಗೌರವ ಪೂರಕವಾಗಿ ಸನ್ಮಾನಿಸಲಾಯಿತು...ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವ ಶ್ರೀ ಖಾಜಾ ಮೊಯಿನುದ್ದೀನ್ ಸರ್, ಈ ಸಮಾರಂಭದ ಉದ್ಘಾಟಕರಾಗಿ ಆಗಮಿಸಿರುವ ಖ್ಯಾತ ನೇತ್ರ ತಜ್ಞರಾದ ಡಾ. ಚೆನ್ನನಗೌಡ

ಮುಖ್ಯ ಅತಿಥಿಗಳಾದ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಭೀಮನಗೌಡ, ವಿಜಯವಾಣಿ ಪತ್ರಕರ್ತರಾದ ಶ್ರೀ ಚಂದ್ರಶೇಖರ್ ಬೆನ್ನೂರು , ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಸಿಂಧನೂರಿನ ಪ್ರಾಂಶುಪಾಲರಾದ ಶ್ರೀ ಶೇಖರಯ್ಯ , ಬಸವೇಶ್ವರ ಪ್ರೌಢಶಾಲೆ ಬಳಗಾನೂರಿನ ನಿವೃತ್ತ ಶಿಕ್ಷಕರಾದ ಶ್ರೀ ಮಹಾಂತೇಶ, ಸ್ವಾಮಿ ವಿವೇಕಾನಂದ ಆಯುರ್ವೇದ ಕಾಲೇಜು, ಲಿಂಗಸುಗೂರಿನ ಅಧ್ಯಕ್ಷರಾದ ಶ್ರೀ ಶಾಂತನಗೌಡ ಪಾಟೀಲ್

ಜಮಾತೆ ಇಸ್ಲಾಮಿ ಹಿಂದ್, ಸಿಂಧನೂರಿನ ಅಧ್ಯಕ್ಷರಾದ ಹುಸೇನ್ ಸಾಬ್ ಉಪಸ್ಥಿತರಿದ್ದರು... ಈ ಕಾರ್ಯಕ್ರಮದಲ್ಲಿ ಸನ್ ರೈಸ್ ನರ್ಸಿಂಗ್ ಕಾಲೇಜಿನ ಲಾಜರ ಸಿರಿಲ್ ರವರು ಪ್ರಾಸ್ತಾವಿಕ ನುಡಿಯನ್ನು ನುಡಿದರು... ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ವೀರೇಶ್ ಅವರು ನಿರೂಪಿಸಿದರು... ಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಇಸಾಕ್ ಅವರು ಸಂಸ್ಥೆಯ ವಾರ್ಷಿಕ ವರದಿಯನ್ನು ಸಲ್ಲಿಸಿದರು... ಈ ಕಾರ್ಯಕ್ರಮದಲ್ಲಿ ಸನ್ ರೈಸ್ ಸಂಸ್ಥೆಯ ಎಲ್ಲಾ ವಿಭಾಗದ ಉಪನ್ಯಾಸಕರು ವಿದ್ಯಾರ್ಥಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**